# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 73
Volume - 01 Issue - 73
ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269
Title- Code: KARKAN 28269
ಚಿತ್ರದುರ್ಗ
Chitradurga
ದಿನಾಂಕ: 26–09–2023 ಮಂಗಳವಾರ
Date: 26-09-2023 Tuesday
ಪುಟ: 4
Page: 4
ಬೆಲೆ : ರೂ.2–00
Price: Rs. 2-00



**ಒಳಪುಟದ ಸುದ್ದಿಗಳು**

ಉಣ್ಣೆ ಕೈಮಗ್ಗ ನೇಕಾರರು, ಉತ್ಪಾದಕರ ಆರ್ಥಿಕ ಬಲವರ್ಧನೆಗೆ ಸಿಎಂ ಜತೆ ಚರ್ಚೆ: ರಘುಮೂರ್ತಿ 2

ಜಾತಿವಾದಿಗಳಿಂದ ವಾಲ್ಮೀಕಿ ಮಹರ್ಷಿ ಕಡೆಗಣನೆ: ವಾಲ್ಮೀಕಿ ಸ್ವಾಮೀಜಿ 3

ದುಡ್ಡು ತೂರುವ ವಿಶಿಷ್ಟ ಶೈಲಿಯ ಕಂಚಿಪುರ ಅಂಬಿನೋತ್ಸವ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಭದ್ರಾ ನಾಲೆಯಲ್ಲಿ ನೀರು ಹರಿಸಲು ವಕೀಲರ ಆಗ್ರಹ



ದಾವಣಗೆರೆ; ಭದ್ರಾ ನಾಲೆಯಿಂದ ರೈತರ ಬೆಳೆಗಳಿಗೆ 100 ದಿವಸ ನೀರು ಹರಿಸಲು ಹಾಗೂ ಕಾವೇರಿ ನದಿ ಪ್ರಾಂತ್ಯದ ರೈತರ ಹಿತರಕ್ಷಣೆಯನ್ನು ಸರ್ಕಾರ ಕಾಪಾಡಬೇಕೆಂದು ಜಿಲ್ಲಾ ವಕೀಲರ ಸಂಘದ ವತಿಯಿಂದ ಜಿಲ್ಲಾಧಿಕಾರಿಗೆ ಮನವಿಯನ್ನು ಸಲ್ಲಿಸಲಾಯಿತು. ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್, ರೈತರ ಹಿತರಕ್ಷಣೆಯನ್ನು ಕಾಪಾಡಲು ಸರ್ಕಾರಕ್ಕೆ ಮನವಿ ಕಳುಹಿಸಿ ಕೊಡುವುದಾಗಿ ತಿಳಿಸಿದರು. ಈ ವೇಳೆ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ.ಬಸವರಾಜ ಗೋಪನಾಳ್, ಕಾರ್ಯದರ್ಶಿ ಎಸ್.ಬಸವರಾಜ್, ಸಹಕಾರ್ಯದರ್ಶಿ ಎ.ಎಸ್.ಮಂಜುನಾಥ, ಕಾರ್ಯಕಾರಿ ಸಮಿತಿ ಸದಸ್ಯರಾದ ವಾಗೀಶ್ ಕಟಗಿಹಳ್ಳಿಮಠ, ಅಜೇಯ್, ಭಾಗ್ಯಲಕ್ಷ್ಮಿ, ರಾಘವೇಂದ್ರ,ನಾಗರಾಜ್,ಚೌಡಪ್ಪ,ನೀಲಕಂಠಯ್ಯ, ಸಂತೋಷಕುಮಾರ್, ರಾಘವೇಂದ್ರ, ಪಾಟೀಲ್, ಲೋಕಿಕೆರೆ ಪ್ರದೀಪ್, ಚನ್ನಮಲ್ಲೇಶ್, ಶ್ರೀನಿವಾಸ, ಆಂಜನೇಯ ಗುರೂಜಿ, ಮಂಜು, ತಿಳುವಳ್ಳಿ ಬಸವರಾಜ, ಲಕ್ಕಪ್ಪ, ಬಸವರಾಜ್ ಕ್ಯಾರೆಕಟ್ಟೆ, ಕೆಂಜಪ್ಪ, ಮಂಜಪ್ಪ, ರಾಮಣ್ಣ, ಶಾಂತವೀರಪ್ಪ, ಮನು, ಬಸಣ್ಣ, ಶಿವಯೋಗಿ ಕುಸಗೂರು, ಸದಾಶಿವ, ಗಣೇಶ್, ನಾಗರಾಜ್ ಪಾಟೀಲ್ ಇತರರು ಇದ್ದರು.

### ಮದ್ಯದಂಗಡಿ ತೆರೆಯುವ ಸರ್ಕಾರದ ಯೋಜನೆ ಖಂಡನೀಯ: ಶ್ರೀ

ಸಾಣೇಹಳ್ಳಿ: ಇಂದಿನ ಪತ್ರಿಕೆಗಳಲ್ಲಿ ಅಬಕಾರಿ ಇಲಾಖೆಯ ಮತ್ತು ಅಬಕಾರಿ ಮಂತ್ರಿಗಳ ಹೊಸ ಅಜಂಡಾ ನೋಡಿ ತುಂಬಾ ವೇದನೆಯಾಯ್ತು. ಇವರಿಗೆ ಯಾರು ಬುದ್ಧಿ ಹೇಳಬೇಕು ಎನ್ನುವುದೇ ತಿಳಿಯದಾಗಿದೆ. ಕರ್ನಾಟಕವನ್ನು ಕಡುಕರ ರಾಜ್ಯವನ್ನಾಗಿಸಿ ತಮ್ಮ ಅಧಿಕಾರವನ್ನು ಸ್ಥಿರಗೊಳಿಸಿಕೊಳ್ಳುವ ಸಂಚು ಇದರ ಹಿಂದಿದೆಯೇ? ಈಗಾಗಲೇ ಕುಡುಕರ ಹಾವಳಿ ಹೆಚ್ಚಾಗಿ ಸಂಪತ್ತು,

ಪುಟ 2

### ಜನತಾ ದರ್ಶನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಅಧಿಕಾರಿಗಳಿಗೆ ಸೂಚನೆ

# ಸಾರ್ವಜನಿಕರ ಅಹವಾಲು ಸ್ವೀಕರಿಸಿ, ಸ್ಥಳದಲ್ಲಿಯೇ ಪರಿಹಾರಕ್ಕೆ ಕ್ರಮವಹಿಸಿ

» **ಚಿತ್ರದುರ್ಗ**

ಸಾರ್ವಜನಿಕರು ಸಣ್ಣ ಪುಟ್ಟ ಸಮಸ್ಯೆಗಳನ್ನು ಹೊತ್ತು ಕಚೇರಿಗಳಿಗೆ ಪದೇ ಪದೇ ಅಲೆದಾಡುವುದನ್ನು ತಪ್ಪಿಸಲು ಮುಖ್ಯಮಂತ್ರಿಗಳ ಆಶಯದಂತೆ ಜನತಾದರ್ಶನ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ, ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ, ನಿಗದಿತ ಕಾಲಮಿತಿಯಲ್ಲಿ ತ್ವರಿತವಾಗಿ ಪರಿಹಾರ ಒದಗಿಸಬೇಕು ಎಂದು ಯೋಜನಾ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಿರಿಯೂರು ನಗರದ ಹುಳಿಯಾರು ರಸ್ತೆಯ ತಾಹಾ ಪ್ಯಾಲೇಸ್ ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಈಗಾಗಲೇ ನಾಲ್ಕು ತಿಂಗಳನ್ನು ಪೂರೈಸಿದೆ. ಆಡಳಿತ ಚುರುಕುಗೊಳಿಸಲು ಜನರ ಸಂಕಷ್ಟಗಳಿಗೆ ಸ್ಪಂದಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಸ್ಪಷ್ಟ ಸಂದೇಶ ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಪ್ರತಿ ತಿಂಗಳು ಜನತಾದರ್ಶನ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಚಿತ್ರದುರ್ಗ ತಾಲೂಕಿನಲ್ಲಿ 800 ಚಳ್ಳಕೆರೆ–900 ಹಿರಿಯೂರು–950 ಹೊಳಲ್ಕೆರೆ– 1285, ಹೊಸದುರ್ಗ –1441, ಹಾಗೂ ಮೊಳಕಾಲ್ಮೂರು ತಾಲೂಕಿನಲ್ಲಿ 1530 ಪೌತಿ ಖಾತೆ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 6500 ಕ್ಕೂ ಹೆಚ್ಚು ಪೌತಿ ಖಾತೆಗಳು ಆಗಬೇಕಿದೆ. ಅಕ್ಟೋಬರ್ 31 ರ ಒಳಗೆ ಈ ಪೌತಿ ಖಾತೆಗಳನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಲು ಕಂದಾಯ ಇಲಾಖೆ ವತಿಯಿಂದ ಆಂದೋಲನ ಹಮ್ಮಿಕೊಳ್ಳಲಾಗಿದೆ. ಕಾಲಮಿತಿಯೊಳಗೆ ಈ ಪೌತಿ ಖಾತೆಗಳನ್ನು ಮಾಡಲಾಗುವುದು ಎಂದು ತಿಳಿಸಿದರು.

ಯಾವುದೇ ಸಾರ್ವಜನಿಕರು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ತಹಶೀಲ್ದಾರ್ ಕಚೇರಿಗಳಿಗೆ ಅಲೆದಾಡಬಾರದು. ಜನರಿಗೆ ತೊಂದರೆಯಾಗದಂತೆ ಸಮರ್ಪಕವಾಗಿ ಸರ್ಕಾರದ ಯೋಜನೆ, ಸೌಲಭ್ಯಗಳನ್ನು ತಲುಪಿಸಲು, ಆಡಳಿತವನ್ನು ಜನರ ಮನೆ ಬಾಗಿಲಿಗೆ ಕೊಂಡ್ಯೊಯಲು ಪ್ರಾಮಾಣಿಕವಾಗಿ ಅಧಿಕಾರಿಗಳು ಶ್ರಮಿಸಬೇಕು ಎಂದು ಸಚಿವ ಡಿ ಸುಧಾಕರ್ ಹೇಳಿದರು.

ಪುಟ 2



### 35 ಫಲಾನುಭವಿಗಳಿಗೆ ಸ್ಥಳದಲ್ಲೇ ಮಾಸಾಶನ

ಸಂಧ್ಯಾಸುರಕ್ಷಾ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ತಮಗೆ ಮಾಸಾಶನ ಮಂಜೂರು ಮಾಡಬೇಕೆಂದು ಜನತಾದರ್ಶನದಲ್ಲಿ ಅರ್ಜಿ ಸಲ್ಲಿಸಿದ ಒಟ್ಟು 35 ಫಲಾನುಭವಿಗಳಿಗೆ ಅಧಿಕಾರಿಗಳು ಮಾಸಾಶನ ಮಂಜೂರು ಮಾಡಿದ್ದು, ಜಿಲ್ಲಾ ಉಸ್ತುವಾರಿ ಸಚಿವರು, ಇದೇ ಸಂದರ್ಭದಲ್ಲಿ ಮಂಜೂರಾತಿ ಪತ್ರವನ್ನು ಫಲಾನುಭವಿಗಳಿಗೆ ವಿತರಿಸಿದರು.



### 325 ಅರ್ಜಿಗಳು ಸಲ್ಲಿಕೆ

ಜನತಾದರ್ಶನದಲ್ಲಿ ಒಟ್ಟು 325 ಅರ್ಜಿಗಳು ಸಾರ್ವಜನಿಕರಿಂದ ಸಲ್ಲಿಕೆಯಾದವು, ಇವುಗಳಲ್ಲಿ ಪ್ರಮುಖವಾಗಿ ರೈತರಿಂದ ಭೂಮಿ ಸಾಗುವಳಿ ಚೀಟಿ ನೀಡುವುದು, ನಿವೇಶನ, ಮನೆ ಮಂಜೂರಾತಿ, ಗ್ರಾಮಗಳಿಗೆ ಮೂಲಭೂತ ಸೌಕರ್ಯ, ಕುಡಿಯುವ ನೀರು, ಬೋರೆವೆಲ್ ಕೊರೆಯಿಸುವುದು, ಗಂಗಾಕಲ್ಯಾಣ ಯೋಜನೆ, ಟ್ರಾನ್ಸ್‌ಫಾರ್ಮರ್ ದುರಸ್ತಿ, ವಿದ್ಯುತ್ ಲೈನ್ ದುರಸ್ತಿ ವಿಷಯಗಳ ಬಗ್ಗೆ ಇದ್ದವು.

### ಸಾರ್ವಜನಿಕರ ಅಭಿಪ್ರಾಯ

ನಮಗೆ ಜಮೀನಿದ್ದು, ಬಡವರಾಗಿದ್ದೇವೆ, ಹೀಗಾಗಿ ಗಂಗಾಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಕೊರೆಯಿಸಿಕೊಡುವಂತೆ ಕೋರಲು ಬಂದಿದ್ದು, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ, ಯಾರಿಗೆ ಮನವಿ ಕೊಡಬೇಕು ಎಂದು ಗೊತ್ತಿರಲಿಲ್ಲ. ಇದೀಗ ಸರ್ಕಾರದಿಂದ ಜನತಾದರ್ಶನ ಕಾರ್ಯಕ್ರಮ ಆಯೋಜಿಸಿದ್ದು, ಸಚಿವರಿಗೆ ನಮ್ಮ ಅಹವಾಲು ಸಲ್ಲಿಸಲು ಉತ್ತಮ ವೇದಿಕೆ ದೊರೆತಂತಾಗಿದೆ.

» ಸೌಭಾಗ್ಯಮ್ಮ, ಇಂಡಿಸ್ ಕಟ್ಟೆ

ಬಹಳ ವರ್ಷಗಳಿಂದ ನಾವು ಭೂಮಿ ಸಾಗುವಳಿ ಮಾಡುತ್ತಿದ್ದೇವೆ, ಆದರೆ ನಮ್ಮ ಹೆಸರಿಗೆ ಜಮೀನು ಇಲ್ಲ, ಹೀಗಾಗಿ ಸರ್ಕಾರದ ಯಾವುದೇ ಸೌಲಭ್ಯ ಸಿಗುತ್ತಿಲ್ಲ, ಬಡ ರೈತರಾದ ನಾವು, ನಮಗೆ ಜಮೀನು ಮಾಡಿಕೊಡಿ ಎಂದು ಮನವಿ ಸಲ್ಲಿಸಲು ಜನತಾದರ್ಶನಕ್ಕೆ ಬಂದಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಮನವಿಯನ್ನು ಆಲಿಸಿದ್ದಾರೆ, ನಮ್ಮ ಕೋರಿಕೆ ಈಡೇರುವ ಭರವಸೆ ದೊರೆತಿದೆ.

» ನಾಗರಾಜು, ತಿಗಳಕಟ್ಟೆ

## ಪ್ರಮುಖ ಸುದ್ದಿ

# ಪ್ರವಾಸೋದ್ಯಮ ಬೆಳೆದರೆ ಸಾಂಸ್ಕೃತಿಕ ಹಿರಿಮೆ ಹೆಚ್ಚಿ ಆರ್ಥಿಕತೆಗೆ ಚೈತನ್ಯ ಬರುತ್ತದೆ: ಸಿಎಂ

» **ಬೆಂಗಳೂರು**

ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳೆದರೆ ನಾಡಿನ ಸಾಂಸ್ಕೃತಿಕ ಹಿರಿಮೆ ಹೆಚ್ಚಿ ಆರ್ಥಿಕತೆಗೆ ಚೈತನ್ಯ ಬರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಪ್ರವಾಸೋದ್ಯಮ ಮತ್ತು ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ "ನಮ್ಮ ಸ್ಮಾರಕ: ನಮ್ಮ ಪರಂಪರೆ, ನಮ್ಮ ಗುರುತು, ನಮ್ಮ ಹೆಮ್ಮೆ" ಅಭಿಯಾನದ ಸಂವಾದ ಮತ್ತು ಡಿಜಿಟಲ್ ವೇದಿಕೆಯ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಇತಿಹಾಸ ತಿಳಿಯದವರು ಭವಿಷ್ಯ ರೂಪಿಸಲಾರರು ಎನ್ನುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಮಾತನ್ನು ಯಾರೂ ಮರೆಯಬಾರದು. ನಮ್ಮ ಇತಿಹಾಸ, ಪರಂಪರೆಯನ್ನು ಈಗಿನ ಪೀಳಿಗೆಗೆ ಅರ್ಥ ಮಾಡಿಸಲು, ಮುಂದಿನ ತಲೆ ಮಾರುಗಳಿಗೆ ನಮ್ಮತನದ ಮಹತ್ವವನ್ನು ಸಾರಲು ಸ್ಮಾರಕಗಳ ರಕ್ಷಣೆ ಅತ್ಯಗತ್ಯ ಎಂದರು.

ಸ್ಮಾರಕಗಳ ರಕ್ಷಣೆಗೆ ಸರ್ಕಾರದ ಜತೆಗೆ ಸಾರ್ವಜನಿಕರು ಕೈ ಜೋಡಿಸಿದರೆ, ನಮ್ಮ ಇತಿಹಾಸ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸಬಹುದು.

ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳೆಸಲು ಸಾಕಷ್ಟು ಅವಕಾಶಗಳಿವೆ. ಅಧ್ಯಾತ್ಮಿಕ ಮತ್ತು ಪರಿಸರ ಪ್ರವಾಸಿ ಕೇಂದ್ರಗಳಿಗೆ, ದೇವಾಲಯಗಳಿಗೆ ಬಡವರೂ ಹೋಗಲು ಅವಕಾಶ ಕಲ್ಪಿಸಬೇಕು ಎನ್ನುವ ಕಾಳಜಿ "ಶಕ್ತಿ" ಯೋಜನೆಯ ಹಿಂದಿದೆ. 60 ಲಕ್ಷ ಮಹಿಳೆಯರು ಇದರ ಪ್ರಯೋಜನ ಪಡೆದು ದೇವಸ್ಥಾನಗಳ ಆದಾಯ ಹೆಚ್ಚಾಗಿದೆ. ಆರ್ಥಿಕತೆಗೆ ಚೈತನ್ಯ ಬಂದು ವ್ಯಾಪಾರ, ವಹಿವಾಟು ಹೆಚ್ಚಾಗಿ ಉದ್ಯೋಗ ಸೃಷ್ಟಿಯಾಗುತ್ತಿದೆ. ಶಕ್ತಿ ಯೋಜನೆ ಹಿಂದೆ ಇಷ್ಟೆಲ್ಲಾ ಕಾಳಜಿಗಳು ಕೆಲಸ ಮಾಡಿವೆ.

ಪುಟ 2



### ಕಾರ್ಯಕ್ರಮದ ಹೈಲೈಟ್ಸ್

- ವಿಶ್ವ ಪರಂಪರೆ ತಾಣವೆಂದು ಘೋಷಿಸಲಾದ ಹೊಯ್ಸಳರ ವಾಸ್ತುಶಿಲ್ಪಿಯ ಸಮಗ್ರ ಭಾಗಗಳನ್ನು ಇನ್ ಟ್ಯಾಕ್ ಸಂಸ್ಥೆ ವತಿಯಿಂದ ಪ್ರಸ್ತುತ ಪಡಿಸಲಾಯಿತು*
- ಬ್ರಿಗೇಡ್ ಸಂಸ್ಥೆಯೊಂದಿಗೆ ವೆಂಕಟಪ್ಪ ಚಿತ್ರಶಾಲೆಯ ನವೀಕರಣ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಯಿತು*
- ಕಲ್ಕಿ ಸಂಸ್ಥೆಗೆ ಯೋಜನಾ ನಿರ್ವಹಣೆ ಘಟಕದ ಒಡಂಬಡಿಕೆ ಪತ್ರಕ್ಕೆ ಸಹಿ*
- ಸಂರಕ್ಷಣಾ ಸ್ಮಾರಕಗಳ ಯೋಜನೆಗೆ ಒಳಪಡಲು ಆಸಕ್ತಿ ವ್ಯಕ್ತಪಡಿಸಿದ ಸಂಸ್ಥೆಗಳಿಗೆ ಆಶಯಪತ್ರ ವಿತರಿಸಲಾಯಿತು*
- ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯಿಂದ ಸ್ಮಾರಕಗಳ 3ಡಿ ಲೇಸರ್ ಸ್ಕ್ಯಾನಿಂಗ್ ಪ್ರಾತ್ಯಕ್ಷಿಕೆ




## ಫಾಸ್ಟ್ ನ್ಯೂಸ್

### ಪ್ರವಾಸೋದ್ಯಮ ಬೆಳೆದರೆ ಸಾಂಸ್ಕೃತಿಕ ಹಿರಿಮೆ ಹೆಚ್ಚಿ ಆರ್ಥಿಕತೆಗೆ ಚೈತನ್ಯ ಬರುತ್ತದೆ: ಸಿಎಂ


» ಮೊದಲ ಪುಟದಿಂದ

ಕೇವಲ ಚುನಾವಣೆ ಕಾರಣಕ್ಕೆ ಮಾಡಿದ್ದಲ್ಲ ಎಂದು ವಿವರಿಸಿದರು. ಸ್ಮಾರಕಗಳನ್ನು ದತ್ತು ಪಡೆಯಲು ಮತ್ತು ಸಂರಕ್ಷಿಸಲು ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂದಿರುವ ಕೈಗಾರಿಕೋದ್ಯಮಿಗಳು ಮತ್ತು ಸಂಘ-ಸಂಸ್ಥೆಗಳಿಗೆ ಇದೇ ಸಂದರ್ಭದಲ್ಲಿ ಅಭಿನಂದಿಸಿದರು. ಪ್ರವಾಸೋದ್ಯಮ ಸಚಿವ ಡಾ.ಎಚ್.ಕೆ.ಪಾಟೀಲ್ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಸ್ಟಾರ್ಟ್ ಅಪ್ ವಿಜನ್ ಗ್ರೂಪ್ ಮತ್ತು ಕಲ್ಕಿ ಫೌಂಡೇಶನ್ ಅಧ್ಯಕ್ಷರಾದ ಪ್ರಶಾಂತ್ ಪ್ರಕಾಶ್ ಅವರು ಆಗಮಿಸಿದ್ದರು. ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್, ಇಲಾಖೆ ನಿರ್ದೇಶಕರಾದ ವಿ.ರಾಮ್ ಪ್ರಸಾತ್ ಮನೋಹರ್, ಇಲಾಖೆಯ ಆಯುಕ್ತರಾದ ಎ.ದೇವರಾಜು ಸೇರಿ ಹಲವರು ಉಪಸ್ಥಿತರಿದ್ದರು.

### ಮದ್ಯದಂಗಡಿ ತೆರೆಯುವ ಸರ್ಕಾರದ ಯೋಜನೆ ಖಂಡನೀಯ: ಶ್ರೀ

» ಮೊದಲ ಪುಟದಿಂದ

ಆರೋಗ್ಯ, ಮರ್ಯಾದೆ, ಪ್ರಾಣ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಪಾರ್ಥೇನಿಯಂನಂತೆ ಬೆಳೆಯುತ್ತಿರುವುದನ್ನು ಜನಪ್ರತಿನಿಧಿಗಳು ಗಮನಿಸದಿರುವುದು ವಿಷಾದನೀಯ. ಜನರ ಆರೋಗ್ಯ, ಆರ್ಥಿಕ ಮತ್ತು ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯಬೇಕಾದ್ದು ಜನಪರ ನೇತಾರನ ಜವಾಬ್ದಾರಿ. ಕ್ಷಣಿಕ ಲಾಭಕ್ಕಾಗಿ ಎಲ್ಲ ಆದರ್ಶಗಳನ್ನು ಗಾಳಿಗೆ ತೂರುವ ನೇತಾರರು ಬುದ್ಧ, ಬಸವಣ್ಣ, ಟಿಪ್ಪು, ಗಾಂಧಿ ಮತ್ತಿತರ ದಾರ್ಶನಿಕರ ಚಿಂತನೆಗಳನ್ನು ಜಾರಿಗೆ ತರುವುದು ಯಾವಾಗ? ಮದ್ಯದ ದುಷ್ಪರಿಣಾಮ



ಅನುಭವಿಸುತ್ತಿರುವ ಕುಟುಂಬದವರು ಮೌನವಹಿಸದೆ ಈಗಲಾದರೂ ಸರ್ಕಾರದ ಧೋರಣೆಯ ವಿರುದ್ಧ ಬಂಡೇಳುವ ಕಾರ್ಯವನ್ನು ಮಾಡಬೇಕು. ಸಮಾಜಮುಖಿ ಚಿಂತಕರು, ಸಾಮಾಜಿಕ ಕಳಕಳಿಯುಳ್ಳ ಸಂಘಟನೆಗಳು ಮುಖ್ಯವಾಗಿ ಮಠಾಧೀಶರು ಈಗಲಾದರೂ ಧ್ವನಿಯೆತ್ತಿ ತಮ್ಮ ತಮ್ಮ ವಲಯದಲ್ಲಿ ಹೋರಾಟ ಮಾಡುವ ಸಂಕಲ್ಪ ಸ್ವೀಕರಿಸಬೇಕು. ಪ್ರವಾಹದ ವಿರುದ್ಧ ಈಜುವುದು ಸುಲಭವಲ್ಲವೆಂದು ನಮಗೂ ಗೊತ್ತು. ಹಾಗಂತ ಅದನ್ನು ಸ್ವಾಗತಿಸಬೇಕು ಎಂದಲ್ಲ. ದೊಡ್ಡ ಅನಾಹುತ ಸಂಭವಿಸುವ ಮೊದಲೇ ಸರ್ಕಾರ ಎಚ್ಚೆತ್ತು ಸಾವಿರ ಮದ್ಯದಂಗಡಿಯ ಯೋಜನೆಯನ್ನು ಬಿಟ್ಟು ಜನರ ಆರ್ಥಿಕ, ನೈತಿಕ ಮೌಲ್ಯಗಳನ್ನು ಕಾಪಾಡುವ, ಆರೋಗ್ಯ ಭಾಗ್ಯ ಕರುಣಿಸುವ ಹೃದಯವಂತಿಕೆ ಮೆರೆಯಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪತ್ರಿಕಾ ಹೇಳಿಕೆ ನೀಡಿದರು.

### ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ: ವಿಕಲಚೇತನ ವಿದ್ಯಾರ್ಥಿಗಳಿಂದ ಅರ್ಜಿ

» ಚಿತ್ರದುರ್ಗ

2023-24ನೇ ಸಾಲಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ (ಎಸ್.ಎಸ್.ಪಿ ಪೋರ್ಟಲ್) ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಆನ್‍ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ವ್ಯಾಪ್ತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ತಾವುಗಳು ವ್ಯಾಸಂಗ ಮಾಡುತ್ತಿರುವ ಶಾಲೆ, ಶಿಕ್ಷಣ ಸಂಸ್ಥೆಗಳ ಮುಖಾಂತರ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ ವೆಬ್‍ಸೈಟ್ https://ssp.karnataka.gov.in/ ನಲ್ಲಿ ಆನ್‍ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ವಿಕಲಚೇತನ ವಿದ್ಯಾರ್ಥಿಗಳು ಆನ್‍ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ ಅರ್ಜಿಯ ಒಂದು ಪ್ರತಿಯನ್ನು ಆಯಾ ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದ್ದೋದೇಶ ಪುನರ್ವಸತಿ ಕಾರ್ಯಕರ್ತರು ಅಥವಾ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಸಲ್ಲಿಸಿ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಕೋರಿದೆ.ಮಾಹಿತಿಗಾಗಿತಾಲ್ಲೂಕುಪಂಚಾಯ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರ ದೂರವಾಣಿ ಸಂಖ್ಯೆ ದೂರವಾಣಿ ಸಂಖೆ ಚಿತ್ರದುರ್ಗ-9880821934, ಚಳ್ಳಕೆರೆ-9611266930, ಹಿರಿಯೂರು-9902888901, 9902898901 ಹೊಳಲ್ಕೆರೆ-9740030227, ಹೊಸದುರ್ಗ - 9741829990, ಮೊಳಕಾಲ್ಮೂರು-9742725576 ಗಳನ್ನು ಸಂಪರ್ಕಿಸಬಹುದಾಗಿದೆ, ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಚಿತ್ರದುರ್ಗ ದೂರವಾಣಿ ಸಂಖ್ಯೆ 08194-235284 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ.ವೈಶಾಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಣ್ಣೆ ಕೈಮಗ್ಗ ನೇಕಾರರು, ಉತ್ಪಾದಕರ ಆರ್ಥಿಕ ಬಲವರ್ಧನೆಗೆ ಸಿಎಂ ಜತೆ ಚರ್ಚೆ: ರಘುಮೂರ್ತಿ

» ಚಳ್ಳಕೆರೆ

ಕರ್ನಾಟಕ ರಾಜ್ಯ ಖಾದಿಯೇತರ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಸಂಘ ಹಾಗೂ ನೇಕಾರರ ಪ್ರಾಥಮಿಕ ಸಂಘಗಳ ಸರ್ವತೋಮುಖ ಅಭಿವೃದ್ಧಿಗೆ ಅವಶ್ಯಕವಿರುವ ಸೌಲಭ್ಯಗಳನ್ನು ನೀಡುವಂತೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಮನವಿ ಮಾಡುವುದಾಗಿ ಶಾಸಕ ಟಿ.ರಘುಮೂರ್ತಿ ತಿಳಿಸಿದರು.



ಅವರು, ನಗರದ ಕಂಬಳಿ ಮಾರುಕಟ್ಟೆ ಆವರಣದಲ್ಲಿ ಗುರುರೇವಣಸಿದ್ದೇಶ್ವರ ಕೈಮಗ್ಗ ನೇಕಾರ ಉತ್ಪಾದಕರ ಕಂಪನಿ ಲಿಮಿಟೆಡ್ ಇದರ 2022-23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಕಳೆದ ಹಲವಾರು ವರ್ಷಗಳಿಂದ ಚಳ್ಳಕೆರೆ ನಗರದಲ್ಲಿರುವ ಉಣ್ಣೆ ಕೈಮಗ್ಗ ನೇಕಾರರ ಸಂಘಕ್ಕೆ ಆರ್ಥಿಕ ಪುನಶ್ಚೇತನ ನೀಡುವ ನಿಟ್ಟಿನಲ್ಲಿ ಈಗಾಗಲೇ ಸಂಬಂಧಪಟ್ಟ ಸಚಿವರೊಂದಿಗೆ ಚರ್ಚೆ ನಡೆಸಿದ್ದೇನೆ. ಉಣ್ಣೆ ಕೈಮಗ್ಗದ ಅಭಿವೃದ್ಧಿಗೆ ಪೂರಕವಾಗಿ ಸರ್ಕಾರ ಉಣ್ಣೆ ಉತ್ಪಾದರ ಸಂಘವನ್ನು ಸ್ಥಾಪಿಸಿ ಅದರ ಮೂಲಕ ಉಣ್ಣೆ ಕೈಮಗ್ಗ ಅಭಿವೃದ್ದಿಗೆ ಸಹಕಾರ ನೀಡುತ್ತಾ ಬಂದಿದೆ. ನೇಕಾರರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಚರ್ಚಿಸುವ ಭರವಸೆ ನೀಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಉಣ್ಣೆ ಉತ್ಪಾದಕರ ಕಂಪನಿ ನಿರ್ದೇಶಕ ಆರ್.ಮಲ್ಲೇಶಪ್ಪ, ಪ್ರಸ್ತುತ ಚಳ್ಳಕೆರೆ ತಾಲ್ಲೂಕಿನಲ್ಲಿ 20 ಗ್ರಾಮಗಳ ವ್ಯಾಪ್ತಿಯಲ್ಲಿ ಉಣ್ಣೆ ಉತ್ಪಾದಕರ ಕಂಪನಿ ಕಾರ್ಯನಿರ್ವಹಿಸಿತ್ತಿದೆ. ನಾಯಕನಹಟ್ಟಿ ಹೋಬಳಿ ಹೊರತು ಪಡಿಸಿ ಕಸಬಾ, ಪರಶುರಾಮಪುರ ವ್ಯಾಪ್ತಿಯ ಗ್ರಾಮಗಳು ಈ ಉತ್ಪಾದಕರ ಕಂಪನಿ ವ್ಯಾಪ್ತಿಯಲ್ಲಿ ಬರಲಿವೆ. ಪ್ರಸ್ತುತ ಈಗಾಗಲೇ 327ಕ್ಕೂ ಹೆಚ್ಚು ಸದಸ್ಯರಿದ್ದು, 3.86 ಲಕ್ಷ ವಾರ್ಷಿಕ ವಹಿವಾಟನ್ನು ನಡೆಸಿದೆ ಎಂದರು.

ಜಿಲ್ಲಾ ಸಂಯೋಜಕ ಡಿ.ಲೋಕೇಶ್ ಮಾತನಾಡಿ, ಚಿತ್ರದುರ್ಗ ಜಿಲ್ಲೆಯಲ್ಲಿ ಅತಿಹೆಚ್ಚು ನೇಕಾರರು ಇರುವ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಉಣ್ಣೆ ಉತ್ಪಾದಕರ ಕಂಪನಿಯನ್ನು ಆರಂಭಿಸಿ ನೇಕಾರರಿಗೆ ಉದ್ಯೋಗದ ಜೊತೆಗೆ ಆರ್ಥಿಕ ಸುಧಾರಣೆಗೆ ಒತ್ತು ನೀಡಲಾಗುತ್ತಿದೆ ಎಂದರು.

ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಟಿ.ತಿಪ್ಪೇಸ್ವಾಮಿ ಮಾತನಾಡಿ, ಕಳೆದ ಹತ್ತಾರು ವರ್ಷಗಳಿಂದ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಉಣ್ಣೆ ಕೈಮಗ್ಗ ಪ್ರಾಥಮಿಕ ಸಹಕಾರ ಸಂಘದ ಸೊಸೈಟಿ ಹಾಗೂ ಇದರಡಿಯಲ್ಲಿ ಬರುವ ನೇಕಾರರಿಗೆ ಉದ್ಯೋಗದ ಜೊತೆಗೆ ಆರ್ಥಿಕ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ನಮ್ಮ ಇಲಾಖೆ ಹಲವಾರು ಉಪಯುಕ್ತ ಯೋಜನೆ ರೂಪಿಸಿಕೊಂಡಿದೆ. ಜಿಲ್ಲೆಯ ಪ್ರತಿಯೊಂದು ಉಣ್ಣೆ ಉತ್ಪಾದಕರ ಕಂಪನಿಯೂ ಸಹ ಸಾಲ ಸೌಲಭ್ಯ ಪಡೆಯುವ ಅವಕಾಶವಿದೆ. ಇದರ ಸದುಪಯೋಗಕ್ಕೆ ಎಲ್ಲರೂ ಮುಂದಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಂಪನಿ ಅಧ್ಯಕ್ಷ ಎಂ.ಈ.ತಿಪ್ಪೇಸ್ವಾಮಿ, ಕಳೆದ ವರ್ಷ ಇದೇ ಸ್ಥಾನದಲ್ಲಿ ಶಾಸಕ ರಘುಮೂರ್ತಿ ನೇತೃತ್ವದಲ್ಲಿ ಈ ಸಂಘ ಸ್ಥಾಪನೆ ಮಾಡಲಾಯಿತು. ಕೇವಲ ಒಂದೇ ಒಂದು ವರ್ಷದಲ್ಲಿ ಉಣ್ಣೆ ಉತ್ಪಾದಕರ ಕಂಪನಿ ಎಲ್ಲಾ ನೇಕಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ಈ ಸಂಸ್ಥೆಯ ಆರ್ಥಿಕ ಬೆಳವಣಿಗೆಗೆ ಎಲ್ಲಾ ರೀತಿಯ ಪರಿಶ್ರಮ ವಹಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಕೆ.ಜಗದೀಶ್, ನಿರ್ದೇಶಕರಾದ ಟಿ.ಪಾಪಣ್ಣ, ಎಸ್.ನಾಗರಾಜು, ವೀರೇಶ್‍ಕುಮಾರ್, ಎಂ.ರಾಜು, ಉಣ್ಣೆ ಕೈಮಗ್ಗ ನೇಕಾರರ ಸಂಘದ ರಾಜ್ಯಾಧ್ಯಕ್ಷ ಬಿ.ಮಲ್ಲಿಕಾರ್ಜುನ, ಕಾರ್ಯದರ್ಶಿ ಗಂಗಾಧರ, ಸಿಇಒ ಸಿ.ಅಜಯ್, ಕೆಪಿಸಿಸಿ ಸದಸ್ಯ ಕಂದಿಕೆರೆ ಸುರೇಶ್‍ಬಾಬು, ಪರಸಪ್ಪ, ನಗರಸಭಾ ಸದಸ್ಯ ಎಂ.ಜೆ.ರಾಘವೇಂದ್ರ ಮುಂತಾದವರು ಉಪಸ್ಥಿತರಿದ್ದರು.

## ಭಕ್ತಿಯಿಂದ ಶ್ರೀಕೃಷ್ಣನನ್ನು ಪೂಜಿಸಿದರೆ ಬದುಕು ಸಾರ್ಥಕ: ಶಾಸಕ ರಘುಮೂರ್ತಿ



» ಚಳ್ಳಕೆರೆ

ಕಳೆದ ನೂರಾರು ವರ್ಷಗಳಿಂದ ಧಾರ್ಮಿಕ ವಿಚಾರಧಾರೆಗಳ ಮೂಲಕವೇ ಜನರ ಮನಪರಿವರ್ತನಾ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದೆ. ವಿಶೇಷವಾಗಿ ಭಗವಾನ್ ಶ್ರೀಕೃಷ್ಣನ ಆಶೀರ್ವಾದ ಹಾಗೂ ಕೃಪೆಯಿಂದ ಸಮಾಜದಲ್ಲಿ ಶಾಂತಿ ನೆಲೆಸಿದೆ ಎಂದು ಶಾಸಕ ಟಿ.ರಘುಮೂರ್ತಿ ತಿಳಿಸಿದರು.

ನಗರದ ವಾಸವಿ ಮಹಾಲ್‍ನಲ್ಲಿ ಶ್ರೀರಾಧಕೃಷ್ಣರ ಜಯಂತಿ ಹಾಗೂ ಬೆಳ್ಳಿ ರಥೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು ಚಳ್ಳಕೆರೆ ಶ್ರೀಗಿರಿಧಾರಿ ಭಕ್ತಿ ಕೇಂದ್ರದ ವತಿಯಿಂದ ಈ ಕಾರ್ಯಕ್ರಮ ಆಯೋಜಿಸಿದ್ದು, ಬೆಳ್ಳಿ ರಥವನ್ನು ಗಿರಿಧಾರಿ ಭಕ್ತಿ ಕೇಂದ್ರದಿಂದ ವಾಸವಿ ಮಹಲ್‍ವರೆಗೂ ನೂರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾದ್ಯ ಭಜನೆಯೊಂದಿಗೆ ಕರೆತರಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಬೆಂಗಳೂರಿನ ಶ್ರೀನರಸಿಂಹ ಗಿರಿಧಾರಿ ಮಂದಿರದ ಅಧ್ಯಕ್ಷ ವರದಕೃಷ್ಣದಾಸ, ನಾವೆಲ್ಲರೂ ಇಂತಹ ಮಹಾನ್ ಪುಣ್ಯ ಕಾರ್ಯದಲ್ಲಿ ಭಾಗವಹಿಸುವ ಮೂಲಕ ಭಗವಾನ್ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದೇವೆ. ಪ್ರತಿಯೊಬ್ಬ ವ್ಯಕ್ತಿಯೂ ದೇವರ ಭಕ್ತನಾಗಿ ಸಮಾಜದಲ್ಲಿ ಸನ್ಮಾರ್ಗವನ್ನು ಕಂಡುಕೊಂಡು ಅದರಲ್ಲಿ ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ನೇತಾಜಿ ಪ್ರಸನ್ನಕುಮಾರ್, ನಗರಸಭಾ ಸದಸ್ಯ ಎಂ.ಜೆ.ರಾಘವೇಂದ್ರ, ಜಗದೀಶ್ವರಚಾರ್, ಮೇಟಿಶ್ರೀನಿವಾಸಲು, ಶಿವಣ್ಣ, ಅಶೋಕ್, ಭಾನುಪ್ರಕಾಶ್, ರೇಣುಕಾ, ಮೋಹಿನಿ, ವೀಣಾ, ಮಲ್ಲಿಕಾರ್ಜುನ್, ಸೌಮ್ಯ ಪಾಲ್ಗೊಂಡಿದ್ದರು.

## ಪೌರ ಕಾರ್ಮಿಕರನ್ನು ಗೌರವಿಸುವ ಕಾರ್ಯ ನಿತ್ಯ ನಡೆಯಲಿ: ಗೋವಿಂದಪ್ಪ



» ಹೊಸದುರ್ಗ

ಹೊಸದುರ್ಗ ಪಟ್ಟಣ ಪುರಸಭೆಗೆ ಈಗಾಗಲೆ ಮೂರು ಪ್ರಶಸ್ತಿಗಳು ಬಂದಿವೆ, ಈ ಪ್ರಶಸ್ತಿಯ ಹಿಂದೆ ಪೌರಕಾರ್ಮಿಕರ ಸೇವೆಯ ಅನನ್ಯವಾದದ್ದು ಗೃಹಿಣಿ ತನ್ನ ಮನೆಯನ್ನು ಸ್ವಚ್ಛತೆಗೊಳಿಸಿ ರಂಗೋಲಿ ಬಿಟ್ಟಂತೆ ಪೌರಕಾರ್ಮಿಕರು ಇಡೀ ನಗರವನ್ನು ಸ್ವಚ್ಛಗೊಳಿಸಿ ನಗರವನ್ನು ಸುಂದರವಾಗಿ ಕಾಣುವಂತೆ ಮಾಡುತ್ತಾರೆ ಅವರನ್ನು ಗೌರವಿಸುವ ಕಾರ್ಯ ಒಂದು ದಿನಕ್ಕೆ ಸೀಮಿತವಾಗದೆ ಪ್ರತಿದಿನ ಗೌರವಿಸುವಂತಾಗಬೇಕು ಎಂದು ಶಾಸಕ ಬಿ.ಜಿ.ಗೋವಿಂದಪ್ಪ ಶ್ಲಾಘಿಸಿದರು.

ಪಟ್ಟಣದ ಪುರಸಭಾ ಕಾರ್ಯಾಲಯದಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಪೌರಕಾರ್ಮಿಕ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ನಗರ ಸ್ವಚ್ಛ ಗಳಿಸುವ ಪೌರಕಾರ್ಮಿಕರ ಸೇವೆಯ ಅನನ್ಯವಾದದ್ದು ಕೇಂದ್ರ ಸರ್ಕಾರ ನಗರ ಸ್ವಚ್ಛತೆಗಾಗಿ ನೀಡುತ್ತಿರುವ ಪ್ರಶಸ್ತಿಯನ್ನು ಹೊಸದುರ್ಗ ಪಟ್ಟಣ ಮೂರು ಬಾರಿ ಪಡೆದಿದೆ.

ನಗರವನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರ ಕುಂದು ಕೊರತೆಗಳನ್ನು ಆಲಿಸುವುದು ಚುನಾಯಿತ ಪ್ರತಿನಿಧಿಗಳ ಆದ್ಯ ಕರ್ತವ್ಯ ಈ ನಿಟ್ಟಿನಲ್ಲಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ನಾನು ಸಿದ್ಧನಿದ್ದೇನೆ ಎಂದರು.

ಪುರಸಭಾ ಮುಖ್ಯ ಅಧಿಕಾರಿ ತಿಮ್ಮರಾಜು ಪ್ರಸ್ತಾವಿಕವಾಗಿ ಮಾತನಾಡಿ ನಗರವನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರ ಆರೋಗ್ಯ ವಿಚಾರಣೆ ಸೇರಿದಂತೆ ಅವರ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಪುರಸಭೆಯ ಆದ್ಯ ಕರ್ತವ್ಯವಾಗಿದೆ ಎಂದರು.

ಪೌರಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಪ್ರತಿ ತಿಂಗಳು ಆರೋಗ್ಯ ತಪಾಸಣೆ ಸೇರಿದಂತೆ ಅವರಿಗೆ ರಕ್ಷಾ ಕವಚಗಳನ್ನು ಸರ್ಕಾರ ನೀಡುತ್ತಿದೆ ಎಂದರು.

ಇದೇ ವೇಳೆ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರನ್ನು ಕಾಯಂ ನೌಕರರೆಂದು ಪರಿಗಣಿಸಿ ಸರ್ಕಾರ ನೀಡಿದ ಆದೇಶ ಪ್ರತಿಗಳನ್ನು ಶಾಸಕರು ಪೌರಕಾರ್ಮಿಕರಿಗೆ ವಿತರಿಸಿದರು .

ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷ ಶ್ರೀನಿವಾಸ್, ಸದಸ್ಯರಾದ ದೊಡ್ಡಯ್ಯ ಜಾಫರ್ ಸಾಧಿಕ್, ರಾಮಚಂದ್ರಪ್ಪ,ಶಂಕ್ರಪ್ಪ, ಮುಖಂಡರಾದ ಆಗ್ರೋ ಶಿವಣ್ಣ ಮತ್ತಿತರರು ಹಾಜರಿದ್ದರು.

## ಪ್ರಮುಖ ಸುದ್ದಿ

# ಅಹವಾಲು ಸ್ವೀಕರಿಸಿ, ಸ್ಥಳದಲ್ಲಿ ಪರಿಹಾರಕ್ಕೆ ಕ್ರಮವಹಿಸಿ

» ಮೊದಲ ಪುಟದಿಂದ

ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್. ಜೆ ಮಾತನಾಡಿ, ಸರ್ಕಾರ ಯೋಜನೆಗಳು ಅರ್ಹರಿಗೆ ಸಮರ್ಪಕವಾಗಿ ತಲುಪಿದಾಗ ಮಾತ್ರ ಅವು ಯಶಸ್ವಿಯಾಗಲಿದೆ. ಈ ನಿಟ್ಟಿನಲ್ಲಿ ಸರ್ಕಾರದ ಹಲವು ಮಹತ್ವಾಕಾಂಕ್ಷೆ ಯೋಜನೆಗಳನ್ನು ಅನಗತ್ಯವಾಗಿ ವಿಳಂಬ ಮಾಡದೇ, ಜನ ಸಾಮಾನ್ಯರನ್ನು ಅಲೆದಾಡಿಸದೇ ತಲುಪಿಸಬೇಕು. ಮನೆಬಾಗಿಲಿಗೆ ಬಂದು ಸಮಸ್ಯೆಗಳನ್ನು ಕೇಳುವ ಮೂಲಕ, ಆ ಸಮಸ್ಯೆಗಳನ್ನು ನಿಗದಿತ ಸಮಯದೊಳಗೆ ಇತ್ಯರ್ಥ ಪಡಿಸಲು ಜಿಲ್ಲೆಯ ಅಧಿಕಾರಿಗಳು ಶ್ರಮಿಸುವ ನಿಟ್ಟಿನಲ್ಲಿ ಜನತಾ ದರ್ಶನ ಕಾರ್ಯಕ್ರಮ ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರತಿ 15 ದಿನಕ್ಕೊಮ್ಮೆ ಒಂದು ತಾಲ್ಲೂಕು ಆಯ್ಕೆ ಮಾಡಿ, ಆ ತಾಲ್ಲೂಕಿನ ಜನಪ್ರತಿನಿಧಿಗಳು, ಅಧಿಕಾರಿಗಳು ಎಲ್ಲರೂ ಸೇರಿ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅನುಕೂಲವಾಗಲಿದೆ ಎಂದರು. ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಲು ಜನಸ್ಪಂದನ-ಐಕಲುಖಖ ಪೋರ್ಟಲ್ ನಲ್ಲಿ ಅರ್ಜಿ, ದೂರುಗಳನ್ನು ಸ್ವೀಕರಿಸಿ, ಇಲಾಖಾವಾರು ವಿಂಗಡಣೆ ಮಾಡಿ, ಅರ್ಜಿಯ ಸ್ಥಿತಿಗತಿಯ ಬಗ್ಗೆ ತಿಳಿಯಲು ಇದರಿಂದ ಅನುಕೂಲವಾಗಲಿದೆ. ಈ ಅರ್ಜಿಯನ್ನು ಅಧಿಕಾರಿಗಳು ಕಾಲಮಿತಿಯೊಳಗೆ ಇತ್ಯರ್ಥಪಡಿಸಬೇಕು. ಅರ್ಜಿ ಸಲ್ಲಿಸುವವರ ಮೊಬೈಲ್‍ಗೆ ಅರ್ಜಿ ಸ್ವೀಕೃತಿಯ ಬಗ್ಗೆ ಸಂದೇಶ ಬರುವ ರೀತಿ ವ್ಯವಸ್ಥೆ ಒದಗಿಸಲಾಗಿದೆ. ಹಾಗಾಗಿ ಜನಸಾಮಾನ್ಯರು ಜನತಾ ದರ್ಶನ ಕಾರ್ಯಕ್ರಮವನ್ನು ಉತ್ತಮ ರೀತಿಯಾಗಿ ಸದುಪಯೋಗ ಪಡಿಸಿಕೊಳ್ಳಬೇಕು. ಸಾರ್ವಜನಿಕರ ಅಹವಾಲು, ಅರ್ಜಿಗಳನ್ನು ಕಾನೂನು ರೀತಿಯಲ್ಲಿ ಕ್ರಮವಹಿಸಲು ಬದ್ಧರಾಗಿದ್ದೇವೆ. ಜನತಾ ದರ್ಶನ ಕಾರ್ಯಕ್ರಮಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ,ಅರ್ಜಿಗಳನ್ನುಆಯಾ ಇಲಾಖಾಮುಖ್ಯಸ್ಥರು ನಿಗದಿತ ಸಮಯದೊಳಗೆ ಇತ್ಯರ್ಥಪಡಿಸಲು ಎಲ್ಲ ರೀತಿಯ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಜನರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕು ಹಾಗೂ ಜನತಾ ದರ್ಶನದಲ್ಲಿ ಸರ್ಕಾರದ ಯೋಜನೆಗಳ ಕುರಿತು ಅರಿವು ಮೂಡಿಸಬೇಕು. ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯುವಂತಾಗಬೇಕು. ಕಂದಾಯ ಇಲಾಖೆಯ ಪೌತಿಖಾತೆಯನ್ನು ಅಂದೋಲನ ರೀತಿಯಲ್ಲಿ ಕೈಗೊಳ್ಳಲು ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ. ಸೋಮಶೇಖರ್ ಮಾತನಾಡಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಏಕ ಕಾಲದಲ್ಲಿ ಜನತಾ ದರ್ಶನ ನಡೆಯುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ಮಟ್ಟದ ಅಧಿಕಾರಿಗಳ ಸಮಕ್ಷಮದಲ್ಲಿ ಜಿಲ್ಲೆಯ ನಾಗರಿಕರು ಸರ್ಕಾರದ ಯೋಜನೆಗಳು, ಸೌಲಭ್ಯಗಳು ವಿಳಂಬವಾದಸಂದರ್ಭದಲ್ಲಿಜಿಲ್ಲಾಮಟ್ಟದಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳಲು ಜನತಾ ದರ್ಶನ ಉತ್ತಮ ವೇದಿಕೆಯಾಗಿದೆ. ಗ್ರಾಮೀಣ ಭಾಗದ ಸಾರ್ವಜನಿಕರ ಕುಂದುಕೊರತೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಯ ಕಚೇರಿಯಲ್ಲಿಯೂ ಕೂಡ ಅಹವಾಲುಗಳನ್ನು ಸಲ್ಲಿಸಬಹುದು. ಯಾವುದಾದರೂ ಕಚೇರಿಯಲ್ಲಿ ಕಡತ ವಿಲೇವಾರಿ ಆಗದೇ ಬಾಕಿ ಇದ್ದರೆ ಜನತಾ ದರ್ಶನದ ಕೌಂಟರ್ ನಲ್ಲಿ ಅಹವಾಲು ದಾಖಲಿಸಿ, ಸ್ವೀಕೃತಿ ಪಡೆಯಿರಿ ಎಂದು ತಿಳಿಸಿದ ಅವರು, ಸರ್ಕಾರದ ಹಲವು ಯೋಜನೆಗಳನ್ನು ತಿಳಿದುಕೊಳ್ಳುವುದು ಆದ್ಯ ಕರ್ತವ್ಯವಾಗಿದೆ ಎಂದರು.

**ಸಾರ್ವಜನಿಕರಿಂದ ಅಹವಾಲು ಸ್ವೀಕಾರ, ಸೌಲಭ್ಯ ವಿತರಣೆ:** ಹಿರಿಯೂರು ನಗರದ ತಾಹಾ ಪ್ಯಾಲೇಸ್‍ನಲ್ಲಿ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ. ಸುಧಾಕರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಜನತಾದರ್ಶನ ಕಾರ್ಯಕ್ರಮ ನಡಯಿತು. ಕಾರ್ಯಕ್ರಮದಲ್ಲಿ ಸಚಿವ ಡಿ. ಸುಧಾಕರ್ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಸರ್ಕಾರದ ವಿವಿಧ ಸೌಲಭ್ಯಗಳನ್ನು ವಿತರಣೆ ಮಾಡಿದರು. ಡಿ.ಎಮ್.ಎಫ್ ನಡಿ ಜಿಲ್ಲಾ ಪಂಚಾಯಿತಿ ಅನುದಾನದಡಿ 8 ವಿಕಲಚೇತನರಿಗೆ ಯಂತ್ರಚಾಲಿತ ತ್ರಿಚಕ್ರ ವಾಹನ, ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ಶೂ, ಶೇಕಡಾ ನೂರಷ್ಟು ಫಲಿತಾಂಶ ಸಾಧಿಸಿದ ಸರ್ಕಾರಿ ಶಾಲೆಗಳಿಗೆ ಪಾರಿತೋಷಕ ಅಭಿನಂದನಾ ಪತ್ರ, ಕಾರ್ಮಿಕ ಇಲಾಖೆ ವತಿಯಿಂದ ನೊಂದಣಿ ಕಾರ್ಡ್, ಲ್ಯಾಪ್ ಟಾಪ್, ಅಂತರ್ಜಾತಿ ವಿವಾಹವಾದವರಿಗೆ ಸಮಾಜ ಕಲ್ಯಾಣ ಇಲಾಖೆ ಪ್ರೋತ್ಸಾಹಧನ, ಕಂದಾಯ ಇಲಾಖೆ 94ಸಿ ಹಕ್ಕು ಪತ್ರ, ವಿವಿಧ ಪಿಂಚಣಿ ಆದೇಶ ಪತ್ರಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುಕನ್ಯ ಸಮೃದ್ಧಿ ಬಾಂಡ್‍ಗಳನ್ನು ಸಚಿವ ಡಿ.ಸುಧಾಕರ್ ಫಲಾನುಭವಿಗಳಿಗೆ ವಿತರಿಸಿದರು.

**ಅರ್ಜಿ ಸ್ವೀಕಾರಕ್ಕೆ ಕೌಂಟರ್‍ಗಳು** : ಸಾರ್ವಜನಿಕರಿಂದ ವಿವಿಧ ಇಲಾಖೆಗಳಿಗೆ ಸಂಬಂದಿಸಿದ ಅಹವಾಲು ಅರ್ಜಿ ಸ್ವೀಕರಿಸಲು, ತಂತ್ರಾಶವನ್ನು ಅಭಿವೃದ್ಧಿ ಪಡಿಸಲಾಗಿದೆ. ಸ್ಥಳದಲ್ಲಿ ಗೊಂದಲವಾಗದ ರೀತಿ, ನಾಲ್ಕು ಕೌಂಟರ್ ಗಳನ್ನು ತೆರೆದು ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸುವ ವ್ಯವಸ್ಥೆ ಮಾಡಲಾಗಿತ್ತು, ಅಲ್ಲದೆ ಅರ್ಜಿ ಸಲ್ಲಿಸಿದವರಿಗೆ ಸ್ವೀಕೃತಿ ಪತ್ರಗಳನ್ನು ಕೂಡ ನೀಡಲಾಯಿತು. ಜನತಾದರ್ಶನಕ್ಕಾಗಿ ಆಗಮಿಸಿದ್ದ ಸಾರ್ವಜನಿಕರಿಗೆ ಮಧ್ಯಾಹ್ನ ಊಟದ ವ್ಯವಸ್ಥೆ ಕೂಡ ಕಲ್ಪಿಸಲಾಗಿತ್ತು. ಸಾರ್ವಜನಿಕರು ವೇದಿಕೆಗೆ ಆಗಮಿಸಿ, ಜಿಲ್ಲಾ ಉಸ್ತುವಾರಿ ಸಚಿವರಿಗೆ ತಮ್ಮ ಅಹವಾಲುಗಳನ್ನು ಸಲ್ಲಿಸಿದರು, ಅಹವಾಲು ಸ್ವೀಕರಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು, ಅಲ್ಲದೆ, ತ್ವರಿತಗತಿಯಲ್ಲಿ ಅರ್ಜಿಗಳ ವಿಲೇವಾರಿಗೆ ಜಿಲ್ಲಾಧಿಕಾರಿಗಳಿಗೂ ನಿರ್ದೇಶನ ನೀಡಿದರು. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ತಾಹಾ ಪ್ಯಾಲೇಸ್ ಆವರಣದಲ್ಲಿ ಕೃಷಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇರಿದಂತೆ ವಿವಿಧ ಇಲಾಖೆಗಳಿಂದ ತೆರೆಯಲಾದ ವಸ್ತು ಪ್ರದರ್ಶನ ಮಳಿಗೆಗಳನ್ನು ಸಚಿವ ಡಿ.ಸುಧಾಕರ್ ಉದ್ಘಾಟನೆ ಮಾಡಿ, ಸಾರ್ವಜನಿಕರ ವೀಕ್ಷಣೆಗೆ ಅನುವು ಮಾಡಿಕೊಟ್ಟರು.

ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಒ ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಕಾರ್ತಿಕ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹೆಚ್.ಜೆ.ಕುಮಾರಸ್ವಾಮಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರವಿಶಂಕರ್ ರೆಡ್ಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಡಾ.ರಂಗನಾಥ, ಜಿ.ಪಂ. ಉಪಕಾರ್ಯದರ್ಶಿ ತಿಮ್ಮಪ್ಪ, ಮುಖ್ಯ ಯೋಜನಾಧಿಕಾರಿ ಸತೀಶ್ ರೆಡ್ಡಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹೇಂದ್ರ ಕುಮಾರ್, ಹಿರಿಯೂರು ತಹಶಿಲ್ದಾರ್ ರಾಜೇಶ್ ಕುಮಾರ್ ಸೇರಿದಂತೆ ಜಿಲ್ಲಾ ಹಾಗೂ ಹಿರಿಯೂರು ತಾಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳ ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ದುಶ್ಚಟಗಳಿಂದ ದೂರವಿರಲು ನಿಯಮಿತ ಯೋಗಭ್ಯಾಸ ಮಾಡುವುದು ಉತ್ತಮ: ಪ್ರಶಾಂತ್



ಹೊಸದುರ್ಗ:ದುಶ್ಚಟಗಳಿಂದ ದೂರವಿರಲು ನಿಯಮಿತವಾಗಿ ಯೋಗ ಅಭ್ಯಾಸ ಮಾಡುವುದು ಉತ್ತಮ ಎಂದು ಧರ್ಮಸ್ಥಳ ಟ್ರಸ್ಟ್‌ನ ಸದಸ್ಯ ಪ್ರಶಾಂತ್ ಚಿಪ್ರಗುತ್ತಿ ಅಭಿಪ್ರಾಯಪಟ್ಟರು.ಪಟ್ಟಣದ ಇಂದಿರಾಗಾಂಧಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.ದುಶ್ಚಟಮುಕ್ತಸಮಾಜನಿರ್ಮಾಣ ಯುವ ಪೀಳಿಗೆಯಿಂದ ಮಾತ್ರ ಸಾಧ್ಯ. ಹಲವಷ್ಟು ಮದ್ಯ ವ್ಯಸನಿಗಳು ಮದ್ಯವ್ಯರ್ಜನಾ ಶಿಬಿರದ ಮೂಲಕ ವ್ಯಸನ ಮುಕ್ತರಾಗಿ ಸಮಾಜದಲ್ಲಿ ಉತ್ತಮ ಬದುಕು ಕಂಡುಕೊಂಡಿದ್ದಾರೆ ಎಂದು ಅವರು ಹೇಳಿದರು.ಪ್ರಸ್ತುತ ದಿನ ಮಾದಕ ವಸ್ತುಗಳ ದುಶ್ಚಟದಿಂದ ಬಲಿಯಾಗುತ್ತಿದ್ದಾರೆ. ಇದನ್ನು ನಿಯಂತ್ರಿಸಲು ಏಕಾಗ್ರತೆ ಮತ್ತು ಧ್ಯಾನ ಮುಖ್ಯವಾಗಿರುತ್ತದೆ. ಹಾಗಾಗಿ ಮುಂದಿನ ಭವಿಷ್ಯದ ಪೀಳಿಗೆಯ ಹಿತ ದೃಷ್ಟಿಯಿಂದ ಇಂತಾ ದುಶ್ಚಟಗಳು ಬಾರದಂತೆ ಎಚ್ಚರವಹಿಸುವುದು ನಮ್ಮ ಮೊದಲ ಕರ್ತವ್ಯವಾಗಿದೆ ಎಂದರು.ಪ್ರಾದೇಶಿಕ ನಿರ್ದೇಶಕಿ ಶ್ರೀಮತಿ ಗೀತಾ ಮಾತನಾಡಿ, ಧರ್ಮಸ್ಥಳ ಯೋಜನೆಯಿಂದ ತಾಲ್ಲೂಕಿನ ಶಾಲಾ–ಕಾಲೇಜುಗಳಲ್ಲಿ ದುಶ್ಚಟ ತಡೆಗಟ್ಟುವ ಬಗ್ಗೆ ಜನಜಾಗೃತಿ ಮೂಡಿಸುತ್ತಿದ್ದೇವೆ. ಪ್ರತಿ ಗ್ರಾಮ ಗ್ರಾಮಗಳಲ್ಲಿ ಬೀದಿ ನಾಟಕಗಳು ಮತ್ತು ಜ್ಞಾನ ವಿಕಾಸದ ಮುಖಾಂತರ ಪ್ರತಿ ತಿಂಗಳು ಸ್ವ–ಸಹಾಯ ಸಂಘದ ಸದಸ್ಯರಿಗೆ ಕಾನೂನಿನ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಜಿಲ್ಲಾ ನಿರ್ದೇಶಕಿ ಗೀತಾ ಮಾತನಾಡಿ ಪ್ರಸ್ತುತ ವೃತ್ತಿಪರ ಶಿಕ್ಷಣಗಳಿಗೆ ಶಿಷ್ಯವೇತನ ನೀಡುತ್ತಿದ್ದು, ವೃತ್ತಿಪರ ವಿದ್ಯಾರ್ಥಿಗಳು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ಥಳೀಯ ಕಛೇರಿಗೆ ಆಗಮಿಸಿ ಅರ್ಜಿ ಸಲ್ಲಿಸುವ ಮುಖಾಂತರ ಇದರ ಉಪಯೋಗ ಪಡೆದುಕೊಳ್ಳಿ ಎಂದರು. ಪ್ರಾಚಾರ್ಯ ಡಾ.ಡಿ ಬಸಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ನಿರ್ದೇಶಕ ವಿನಯ್ ಕುಮಾರ್, ಯೋಜನಾಧಿಕಾರಿ ಶಿವಣ್ಣ, ಕಸಾಪ ಅಧ್ಯಕ್ಷ ಬಿ.ಪಿ ಓಂಕಾರಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

### ಜ್ಞಾನ ಎಲ್ಲಾ ವರ್ಗದ ಮಕ್ಕಳಿಗೆ ಸಿಗಬೇಕಂಬ ದೂರದೃಷ್ಟಿಯಾಗಿತ್ತು ತರಳಬಾಳು ಶ್ರೀಗಳದ್ದು



ಹೊಸದುರ್ಗ:ಯಾರೂ ಕದಿಯದ ಆಸ್ತಿ ಎಂದರೆ ಅದು ವಿದ್ಯೆ. ಅಂಥ ಅಮೂಲ್ಯವಾದ ಜ್ಞಾನ ಎಲ್ಲಾ ವರ್ಗದ ಮಕ್ಕಳಿಗೆ ಸಿಗಬೇಕಂಬ ದೂರದೃಷ್ಟಿಯಿಂದ ತರಳಬಾಳು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಸ್ವಾತಂತ್ರ್ಯ ಪೂರ್ವದಲ್ಲೇ ನನಸು ಮಾಡಿದವರು. ಅಂಥ ಮಹಾ ಮಾನವತಾವಾದಿ ಸ್ಥಾಪಿಸಿದ ಇಂಥ ನೂರಾರು ಶಾಲೆಗಳಲ್ಲಿ ನಿಮ್ಮಂಥ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ನೀವೆಲ್ಲಾ ತಮ್ಮ ಕಲಿಕೆಯಿಂದ ಸಮಾಜಕ್ಕೆ ಏನಾದರೂ ಕೊಡುಗೆಯನ್ನು ಕೊಟ್ಟಾಗ ಪೂಜ್ಯರ ಚಿಂತನೆ ಸಾಕಾರವಾಗುತ್ತದೆ ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಬಿಲ್ಲಪ್ಪನವರು ಹೇಳಿದರು.

ಅವರು ಪಟ್ಟಣದ ಶ್ರೀ ತೋಟದರಾಮಯ್ಯ ಗೌರಮ್ಮ ಬಾಲಿಕಾ ಪ್ರೌಢಶಾಲೆಯಲ್ಲಿ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 31ನೆಯ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕನ್ನಡ ಅಧ್ಯಾಪಕರಾದ ಜಿ ಎಸ್ ಗಿರಿಜಾಶಂಕರ್ ಮಾತನಾಡಿ ಶ್ರೀ ಶಿವಕುಮಾರ ಶ್ರೀಗಳು ಕೇವಲ ಮಠವನ್ನು ಕಟ್ಟಲಿಲ್ಲ. ಮಠದ ಜೊತೆಗೆ ಮನವನ್ನು ಕಟ್ಟುವ ಕೆಲಸವನ್ನು ಮಾಡಿದರು. ಹೀಗಾಗಿ ಎಲ್ಲಾ ವರ್ಗದ ಜನರೂ ಮಠದ ಶಿಷ್ಯರಾಗಲು ಸಾಧ್ಯವಾಯಿತು ಎಂದು ತಮ್ಮ ನುಡಿನಮನ ಸಲ್ಲಿಸುತ್ತಾ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿಕೊಂಡಿದ್ದ ಶಾಲಾ ಸಲಹಾ ಸಮಿತಿಯ ಉಪಾಧ್ಯಕ್ಷರಾದ ಬಿ ಪಿ ಓಂಕಾರಪ್ಪನವರು ಮಾತನಾಡುತ್ತಾ ಪೂಜ್ಯರು ಗ್ರಾಮೀಣ ಭಾಗದ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದರಿಂದ ಸಾವಿರಾರು ವಿದ್ಯಾರ್ಥಿಗಳು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಯಿತು ಎಂದು ತಿಳಿಸಿದರು. ಮುಖ್ಯ ಶಿಕ್ಷಕರಾದ ಎ ಎನ್ ಕಿರಣ್ ಕುಮಾರ್ ಶ್ರೀಗಳನ್ನು ಕುರಿತು ಮಾತನಾಡಿದರು. ಎಲ್ಲಾ ವಿದ್ಯಾರ್ಥಿಗಳು ಸಾಮೂಹಿಕ ಪ್ರಾರ್ಥನೆ ಮಾಡಿದರು. ಶಿಕ್ಷಕರಾದ ಹೆಚ್ ಎಸ್ ಅಶೋಕ್ ಸ್ವಾಗತಿಸಿದರು. ಶಿಕ್ಷಕರಾದ ಬಿ ಮಧು ನಿರೂಪಿಸಿದರು.



ಚಳ್ಳಕೆರೆ ನಗರದ ಬೆಸ್ಕಾಂ ಕಚೇರಿ ಶಕ್ತಿ ಗಣಪತಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ಭಾನುವಾರ ಬೆಸ್ಕಾಂ ಅಧಿಕಾರಿಗಳು ಸಿಬ್ಬಂದಿ ಭವ್ಯ ಮೆರವಣಿಗೆಯೊಂದಿಗೆ ವಿಸರ್ಜಿಸಿದರು. ಬೆಸ್ಕಾಂ ಎಇಇ ರಾಜು, ಸಿ.ನಾಗರಾಜು ಮೊದಲಾದವರು ಇದ್ದರು.



ಚಳ್ಳಕೆರೆಯ ಅಂಬೇಡ್ಕರ್ ನಗರದ ಭಗತ್‌ಸಿಂಗ್ ಹಿತರಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಮಿತಿ ದ್ವಿತೀಯ ಭಾರಿ ಪ್ರತಿಷ್ಠಾಪಿಸಿದ್ದ ಗಣೇಶಮೂರ್ತಿಯನ್ನು ಭಾನುವಾರ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ವಿಸರ್ಜಿಸಿದರು.

# ಜಾತಿವಾದಿಗಳಿಂದ ವಾಲ್ಮೀಕಿ ಮಹರ್ಷಿ ಕಡೆಗಣನೆ

» **ಹೊಸದುರ್ಗ**

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗುತ್ತಿದೆ. ಆದರೆ, ಶ್ರೀರಾಮನ ಅಸ್ತಿತ್ವವನ್ನು ತೋರಿಸಿದ ವಾಲ್ಮೀಕಿ ಮಹರ್ಷಿಗಳ ಮಂದಿರ ನಿರ್ಮಾಣ ಮಾಡುತ್ತಿಲ್ಲ. ವಾಲ್ಮೀಕಿ ಮಹರ್ಷಿಗಳು ಬೇಡ ಜಾತಿಯಲ್ಲಿ ಹುಟ್ಟಿದ್ದಾರೆ ಎಂಬ ಕಾರಣಕ್ಕಾಗಿ ಮೂಲಭೂತವಾದಿಗಳು, ಪಟ್ಟಭದ್ರರು, ಜಾತಿವಾದಿಗಳು ಅವರನ್ನು ತಿರಸ್ಕಾರ ಮಾಡುತ್ತಿದ್ದಾರೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಹುಳಿಯಾರು ರಸ್ತೆಯಲ್ಲಿರುವ ಶಿವಗಂಗಾ ಕಲ್ಯಾಣ ಮಂಟಪದಲ್ಲಿ ಭಾನುವಾರ ವಾಲ್ಮೀಕಿ ನಾಯಕ ಸಮಾಜ, ನೌಕರರ ಸಂಘ ಹಾಗೂ ಯುವಪಡೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಜಿಲ್ಲೆಯ ಶಾಸಕರು, ಸಮಾಜದ ಸಚಿವರು ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಒಂದು ಸಮುದಾಯ ಎಲ್ಲಾ ರಂಗಗಳಲ್ಲೂ ಮುಂದೆ ಬರಬೇಕಾದರೆ, ತಮ್ಮ ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡಬೇಕು. ಆದಾಗ ಮಾತ್ರ ಮುಖ್ಯ ವಾಹಿನಿಗೆ ಬರಲುಸಾಧ್ಯ. ಈ ನಿಟ್ಟಿನಲ್ಲಿ ವಾಲ್ಮೀಕಿ ಪೀಠ ಸಮುದಾಯದ ಪರವಾಗಿದ್ದು, ಸಮಾಜ ಬಾಂಧವರು ನಮ್ಮ ಜೊತೆ ಕೈಜೋಡಿಸಬೇಕು ಎಂದರು.

2008ರಲ್ಲಿ ಕೇಂದ್ರದ ಗೃಹ ಸಚಿವ ಅಮಿತ್ ಶಾ ಚಿತ್ರದುರ್ಗಕ್ಕೆ ಬಂದಾಗ ಮದಕರಿ ನಾಯಕರ ಥೀಮ್ ಪಾರ್ಕ್ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಈ ಮೂಲಕ ಸಮುದಾಯದ ಬಹುತೇಕಮತಗಳನ್ನುಸೆಳೆದಿದ್ದರು.ಆದರೆ, ಥೀಮ್ ಪಾರ್ಕ್ ಗೆ ಇಂದಿಗೂ ಚಾಲನೆ ದೊರೆತಿಲ್ಲ . ನಾಯಕ ಸಮುದಾಯದ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ. ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಲವು ಮಹತ್ತರವಾದ ನಿರ್ಧಾರಗಳನ್ನು ತೆಗೆದುಕೊಂಡಿದೆ. ಈ ನಿಟ್ಟಿನಲ್ಲಿ ಸಮುದಾಯ ನಮ್ಮ ಹಿತ ಕಾಯುವವರ ಪರವಾಗಿರಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಬಿ.ಜಿ.ಗೋವಿಂದಪ್ಪ ಮಾತನಾಡಿ, 4 ಗೋಡೆಯ ಶಿಕ್ಷಣದಿಂದ ವ್ಯಕ್ತಿ ರೂಪಗೊಳ್ಳಬಹುದು. ಆದರೆ, ವ್ಯಕ್ತಿತ್ವ ರೂಪಿಸಿಕೊಳ್ಳಲು ಸಂಸ್ಕಾರಯುತ ಶಿಕ್ಷಣ ನೀಡಬೇಕಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬರಲು ವಾಲ್ಮೀಕಿ ಗುರುಗಳು ಪ್ರಮುಖಪಾತ್ರ ವಹಿಸಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ವಾಲ್ಮೀಕಿ ಸಮುದಾಯ ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರ ಪರಿಣಾಮವಾಗಿ ಬಹುಮತದ ಸರ್ಕಾರ ಮಾಡಲು ಸಾಧ್ಯವಾಗಿದೆ. ವಾಲ್ಮೀಕಿ ನಾಯಕ ಸಮುದಾಯದ ಅಭಿವೃದ್ಧಿಗೆ ಸದಾ ಕಂಕಣಬದ್ಧನಾಗಿದ್ದೇನೆ. ಗೋಮಾಳ, ಹುಲ್ಲು ಬಂದಿ ಕರಾಬು, ಡೀ□□□□□ರಣ್ಯ ಪ್ರದೇಶಗಳಲ್ಲಿ ಸಾಗುವಳಿ ಮಾಡಿರುವ ಸಮುದಾಯದ ಜನರಿಗೆ ಶೀಘ್ರದಲ್ಲೇ ಸಾಗುವಳಿ ಪತ್ರ ನೀಡಲಾಗುವುದು. ಈಗಾಗಲೇ ಸಾಗುವಳಿ ಪತ್ರನೀಡಲಾಗಿರುವ ಸರ್ಕಾರಿ ಜಮೀನುಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ನೀರಾವರಿ ಅನುಕೂಲ ಮಾಡಿ ಕೊಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯ ಭಾಗವಾಗಿ ಎಸೆಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹೊಸದುರ್ಗ ಶಾಸಕ ಬಿ.ಜಿ.ಗೋವಿಂದಪ್ಪ ಮತ್ತು ಚಳ್ಳಕೆರೆ ಶಾಸಕ ಟಿ.ರಘುಮೂರ್ತಿಗೆ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷ ಕೆ.ಟಿ.ರಂಗನಾಥ್ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕ ಅಂಜನಪ್ಪ ವಿಶೇಷ ಉಪನ್ಯಾಸ ನೀಡಿದರು. ಸರ್ಕಾರಿ ಅಭಿಯೋಜಕ ರುದ್ರಮುನಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಶ್ರೀನಿವಾಸ್, ನೌಕರರ ಸಂಘದ ಅಧ್ಯಕ್ಷ ಜಯಪ್ರಕಾಶ್, ಪ್ರಧಾನಗಳಾದ ಕಾರ್ಯದರ್ಶಿ ಮೈಲಾರಪ್ಪ, ವೆಂಗಳಾಪುರ ರಂಗನಾಥ್, ಉಪಾಧ್ಯಕ್ಷ ತಿಪ್ಪೇಶ್, ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಗುತ್ತಿಕಟ್ಟೆ ಕೆಂಚಪ್ಪ, ತುಂಬಿನಕೆರೆ ಬಸವರಾಜ್, ಮುಖಂಡರಾದ ಮಳಲಿ ತಿಪ್ಪೇರುದ್ರಯ್ಯ, ಹುಣವಿನಡು ಜಯಣ್ಣ, ಕೊಂಡಜ್ಜಿ ಮಹೇಶ್, ಕಪ್ಪಗೆರೆ ರವಿ, ವಾಲ್ಮೀಕಿ ರವಿತೇಜ, ಹೊನ್ನೇನಹಳ್ಳಿ ಮಂಜುನಾಥ್ ಮತ್ತು ಕೊಂಡಜ್ಜಿ ನಾಗರಾಜ್ ಸೇರಿದಂತೆ ಇತರ ಮುಖಂಡರು ನೌಕರವರ್ಗದವರು ಹಾಗೂ ಸಮುದಾಯದ ನೂರಾರು ಬಂಧುಗಳು ಪಾಲ್ಗೊಂಡಿದ್ದರು.





### ಮದಕರಿ ಪುತ್ಥಳಿ ನಿರ್ಮಾಣಕ್ಕೆ ಸಹಕಾರ

ಕಳೆದ 4 ದಶಕಗಳಿಂದಲೂ ನನ್ನ ರಾಜಕೀಯ ಯಶಸ್ಸಿಗೆ ನಾಯಕ ಸಮುದಾಯದ ಬಂಧುಗಳು ಬಹಳಷ್ಟು ಸಹಕಾರ ನೀಡಿದ್ದೀರಿ. ನಿಮ್ಮ ಪ್ರೀತಿ, ವಿಶ್ವಾಸ, ನಂಬಿಕೆ ಮತ್ತು ಸಹಕಾರಕ್ಕೆ ಸದಾ ಆಭಾರಿಯಾಗಿರುವೆ. ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಸಂಪೂರ್ಣವಾಗಿ ಬೆಂಬಲಿಸಿದ್ದೀರಿ. ನಿಮ್ಮ ಬೇಡಿಕೆಗಳನ್ನು ಒಂದೊಂದಾಗಿ ಈಡೇರಿಸುವ ಜವಾಬ್ದಾರಿ ನನ್ನದು. ನಿಮ್ಮ ಮನವಿಯಂತೆ ಹುಳಿಯರು ರಸ್ತೆಯಲ್ಲಿರುವ ಮದಕರಿ ಸರ್ಕಲ್ ನಲ್ಲಿ ರಾಜ ವೀರ ಮದಕರಿ ನಾಯಕರ ಪುತ್ತಳಿ ನಿರ್ಮಾಣಕ್ಕೆ ಸಂಪೂರ್ಣವಾಗಿ ಸಹಕಾರ ನೀಡುವೆ.

» **ಬಿ.ಜಿ.ಗೋವಿಂದಪ್ಪ, ಶಾಸಕರು**

# ಅಗ್ನಿವೀರ್ ಯೋಜನೆಯಲ್ಲಿ ಮಹತ್ವದ ಬದಲಾವಣೆ

» **ನವದೆಹಲಿ**

ಸೇನೆಯಲ್ಲಿ ನೇಮಕಾತಿಗಾಗಿ 2022 ರಲ್ಲಿ ಜಾರಿಗೆ ತಂದ ಅಗ್ನಿವೀರ್ ಯೋಜನೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಸರ್ಕಾರ ಯೋಜಿಸುತ್ತಿದೆ. ಶೀಘ್ರದಲ್ಲೇ ಸೇನೆಯಲ್ಲಿ ಖಾಯಂ ಆಗುವ ಸೈನಿಕರ ಸಂಖ್ಯೆ ಹೆಚ್ಚಾಗಬಹುದು ಎಂಬ ಸುದ್ದಿ ಇದೆ.ಸದ್ಯ ಈ ಬಗ್ಗೆ ಅಧಿಕೃತವಾಗಿ ಏನನ್ನೂ ಹೇಳಿಲ್ಲ.ಪ್ರಸ್ತುತ ನಿಬಂಧನೆಗಳ ಪ್ರಕಾರ, ಅಗ್ನಿವೀರ್ ಯೋಜನೆಯಡಿಯಲ್ಲಿ ಸೇನೆಯ ಭಾಗವಾಗುವ 25 ಪ್ರತಿಶತ ಸೈನಿಕರನ್ನು ತರಬೇತಿಯ ನಂತರ ಖಾಯಂಗೊಳಿಸಲಾಗುತ್ತದೆ.

ಖಾಯಂ ಮಾಡಲಾಗುತ್ತಿರುವ ಅಗ್ನಿವೀರ್‌ಗಳ ಶೇಕಡಾವಾರು ಪ್ರಮಾಣವನ್ನು ಶೇಕಡಾ 50ಕ್ಕೆ ಏರಿಸಲು ರಕ್ಷಣಾ ಸಚಿವಾಲಯ ಗಂಭೀರವಾಗಿ ಪರಿಗಣಿಸುತ್ತಿದೆ ಎಂದು ಉನ್ನತ ಮೂಲಗಳು ಈ ಮಾಹಿತಿಯನ್ನು ನೀಡಿವೆ. ಕಳೆದ ವರ್ಷ




ಜಾರಿಗೊಳಿಸಲಾದ ಅಗ್ನಿವೀರ್ ಯೋಜನೆಯಡಿ ನಾಲ್ಕು ವರ್ಷಗಳ ಕಾಲ ಸೈನಿಕರನ್ನು ನೇಮಿಸಲಾಗುತ್ತದೆ. ಭೂಮಿ, ಸಮುದ್ರ ಮತ್ತು ವಾಯು ಮೂರು ಸೇನೆಗಳಲ್ಲೂ ಇದೇ ವಿಧಾನವನ್ನು ಅಳವಡಿಸಲಾಗಿದೆ. ಎಲ್ಲಾ ಮೂರು ಸೇನೆಗಳಲ್ಲಿ ಅಗ್ನಿಶಾಮಕ ಯೋಧರ ಮೊದಲ ಬ್ಯಾಚ್‌ಗಳು ಆಗಮಿಸಿವೆ. ಮೂಲಗಳ ಪ್ರಕಾರ, ಯೋಜನೆಯಲ್ಲಿ ಸುಧಾರಣೆಗೆ ಸಂಬಂಧಿಸಿದಂತೆ ಹಲವು ಸಲಹೆಗಳನ್ನು ಸೇನೆಗಳಿಂದ ಸ್ವೀಕರಿಸಲಾಗಿದೆ. ಅದರಲ್ಲೂ ವಿಶೇಷವಾಗಿ ನೌಕಾಪಡೆ ಮತ್ತು ವಾಯುಸೇನೆಯು ನಾಲ್ಕು ವರ್ಷಗಳಲ್ಲಿ ತರಬೇತಿ ಪಡೆದ 75 ಪ್ರತಿಶತದಷ್ಟು ಅಗ್ನಿಶಾಮಕ ಸಿಬ್ಬಂದಿಯನ್ನು ಮನೆಗೆ ಕಳುಹಿಸಲು ನಷ್ಟವಾಗಿದೆ ಎಂದು ಹೇಳುತ್ತದೆ. ಏಕೆಂದರೆ, ಅವರು ತಾಂತ್ರಿಕ ಕೆಲಸದಲ್ಲಿ ಹೇಳುತ್ತದೆ. ಏಕೆಂದರೆ, ಅವರು ತಾಂತ್ರಿಕ ಕೆಲಸದಲ್ಲಿ ಪ್ರವೀಣರಾದ ತಕ್ಷಣ ಅವರ ಸೇವಾ ಅವಧಿಯು ಪೂರ್ಣಗೊಳ್ಳುತ್ತದೆ.

ನೌಕಾಪಡೆ ಮತ್ತು ವಾಯುಪಡೆಯ ಹೆಚ್ಚಿನ ಸೈನಿಕರು ತಾಂತ್ರಿಕ ಕೆಲಸವನ್ನು ಮಾಡುತ್ತಾರೆ. ಸೇನೆಯಲ್ಲಿಯೂ ಸೈನಿಕರು ಹಲವು ಶಾಖೆಗಳಲ್ಲಿ ತಾಂತ್ರಿಕ ಕೆಲಸಗಳನ್ನು ಮಾಡಬೇಕು. ಈ ಸಲಹೆಯನ್ನು ಪರಿಗಣಿಸಲಾಗುತ್ತಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಮೊದಲ ಬ್ಯಾಚ್‌ಗೆ ಒಂದು ವರ್ಷ ಮಾತ್ರ ಕಳೆದಿದೆ.

### ಅಕ್ಟೋಬರ್ 1 ರಂದು ಒಂದು ಗಂಟೆ ಶ್ರಮದಾನ ಮಾಡಿ: ಮೋದಿ ಕರೆ

**ನವದೆಹಲಿ:** ಮಹಾತ್ಮ ಗಾಂಧಿಯವರ ಜನ್ಮ ದಿನಾಚರಣೆಯ ಅಂಗವಾಗಿ ಅಕ್ಟೋಬರ್ 1 ರಂದು ಬೆಳಿಗ್ಗೆ 10 ಗಂಟೆಗೆ ಸ್ವಚ್ಛತೆಗಾಗಿ ಒಂದು



ಗಂಟೆ ಶ್ರಮದಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಈ ಸೇವಾ ಕಾರ್ಯಕ್ರಮದಲ್ಲಿ ಎಲ್ಲಾ ಜನರು ಭಾಗವಹಿಸಬೇಕೆಂದು ಅವರು ಒತ್ತಾಯಿಸಿದರು. ಮನ್ ಕಿ ಬಾತ್ ಮತ್ತು ವಂದೇ ಭಾರತ್ ರೈಲುಗಳ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಈ ವಿಷಯವನ್ನು ಪ್ರಸ್ತಾಪಿಸಿದರು. "ನಿಮ್ಮ ಬೀದಿಯಲ್ಲಿ ಅಥವಾ ನಿಮ್ಮ ನೆರೆಹೊರೆಯಲ್ಲಿ, ಉದ್ಯಾನವನ, ನದಿ, ಸರೋವರ ಅಥವಾ ಇತರ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನೀವು ಈ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಬಹುದು. ಅಮೃತ ಸರೋವರ ನಿರ್ಮಾಣವಾಗುವ ಎಲ್ಲೆಡೆ ಸ್ವಚ್ಛತೆ ಕಾಪಾಡಬೇಕು" ಎಂದು ಪ್ರಧಾನಿ ಹೇಳಿದರು. ಆದರೆ.. ಏಕ್ ತಾರೀಖ್ ಏಕ್ ಘಂಟಾ ಏಕ್ ಸಾಥ್ ಎಂದು ಕರೆಯಲ್ಪಡುವ ಅಭಿಯಾನದ ಭಾಗವಾಗಲು ಅವರು ಬಯಸುತ್ತಾರೆ ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

## ಪ್ರಮುಖ ಸುದ್ದಿ

# ಪೌರಕಾರ್ಮಿಕರ ದಿನಾಚರಣೆಯಲ್ಲಿ ಸದಸ್ಯರು ಗೈರು

» **ನಾಯಕನಹಟ್ಟಿ**

ಪಟ್ಟಣದಲ್ಲಿ 16 ಜನ ಸದಸ್ಯರುಗಳಿದ್ದು ಅದರಲ್ಲಿ 4 ಜನರ ಸದಸ್ಯರುಗಳು ಬಂದಿದ್ದರು ಇನ್ನೂ ಉಳಿದ 12 ಜನ ಗೈರು ಹಾಜರಾಗಿದ್ದರಿಂದ ಪಟ್ಟಣ ಪಂಚಾಯಿತಿಯ ಪೌರಕಾರ್ಮಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ನಾಯಕನಹಟ್ಟಿ ಪೌರಕಾರ್ಮಿಕರಿಗೆ ನಾವೆಲ್ಲರೂ ಹೆಚ್ಚಿನ ಗೌರವ ಕೊಡಬೇಕು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಪಟ್ಟಣಕ್ಕಾಗಿ ದುಡಿಯುತ್ತಿರುವ ನಮ್ಮ ಪೌರಕಾರ್ಮಿಕರಿಗೆ ಯಾವಗಲೂ ನಮ್ಮ ಬೆಂಬಲ ನಿಮಗೆ ಇದ್ದೇ ಇರುತ್ತದೆ ಎಂದು ಪ.ಪಂ.ಸದಸ್ಯರಾದ ಸೈಯದ್ ಅನ್ವರ್ ಹೇಳಿದರು.

ಪಟ್ಟಣದ ಪಟ್ಟಣ ಪಂಚಾಯಿತಿಯಲ್ಲಿ ಪೌರಕಾರ್ಮಿಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿ ಶಿಕ್ಷಣ ಕೊಡುವುದರ ಮೂಲಕ ದೊಡ್ಡಮಟ್ಟದಲ್ಲಿ ಬೆಳೆಯುತ್ತಾರೆ ಎಂದರು.

ಪೌರಕಾರ್ಮಿಕರು ಸ್ವಚ್ಛವಾಗಿ ಇರಬೇಕೆಂದರೆ ನಿಮ್ಮ ಮನಸ್ಸು ಸಹ ಸಂಚಲನೆ ಮೂಡಿರಬೇಕು ಎಂದರು.



ಸ್ವಚ್ಛತೆ ಮತ್ತು ಸಾರ್ವಜನಿಕರ ದಿನನಿತ್ಯ ಪೌರಕಾರ್ಮಿಕರು ನಮ್ಮ ಪಟ್ಟಣ ಪಂಚಾಯಿತಿಯ ಬೆನ್ನೆಲುಬು ಎಂದರೆ ಅದು ತಪ್ಪಾಗಲಾರದು ಎಂದು ಅವರು ಮಾತನಾಡಿದರು.

ಪಟ್ಟಣ ಪಂಚಾಯಿತಿಯ 15ನೇ ವಾರ್ಡ್‌ನ ಸದಸ್ಯರಾದ ಪೆದ್ದನಓಬಯ್ಯ ಮಾತನಾಡಿ ಪೌರಕಾರ್ಮಿಕರು ಆರೋಗ್ಯ ಕಡೆ ಹೆಚ್ಚಿನ ಗಮನ ಹರಿಸಬೇಕು. ಆರೋಗ್ಯ ಸಮಸ್ಯೆ ಉಂಟಾದಗ ತಕ್ಷಣ ವೈದ್ಯರನ್ನು ಬೇಟಿ ಮಾಡಿ ಮತ್ತು ಬೆಳಿಗ್ಗೆ ಹಾಗೂ ಸಾಯಂಕಾಲದವರೆಗೂ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಶ್ರಮವನ್ನು ಪ್ರತಿಯೊಬ್ಬರು ಅವರನ್ನು ಹೆಚ್ಚನದಾಗಿ ಗೌರವಿಸಬೇಕು. ಪೌರಕಾರ್ಮಿಕರುನಾಯಕನಹಟ್ಟಿಶ್ರೀಗುರು ತಿಪ್ಪೇರುದ್ರಸ್ವಾಮಿ ಸನ್ನಿಧಿಯನ್ನು ಸ್ವಚ್ಛವಾಗಿ ಕಾಪಾಡುತ್ತಾರೆ. ತಮ್ಮ ಆರೋಗ್ಯವನ್ನು ಲೆಕ್ಕಿಸದೆ ನಮ್ಮೆಲ್ಲರ ಆರೋಗ್ಯವನ್ನು ಪೌರಕಾರ್ಮಿಕರು ಕಾಪಾಡುತ್ತಾರೆ ಅದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಯಾದ ಶಿವಕುಮಾರ್ ಮಾತನಾಡಿ ಪೌರಕಾರ್ಮಿಕರ ದಿನಾಚರಣೆಯನ್ನು ನೌಕರರು, ಪೌರಕಾರ್ಮಿಕರು ಆಚರಿಸುವ ಶ್ರೇಷ್ಠವಾದ ಹಬ್ಬದ ದಿನವಾಗಿದೆ. ಇನ್ನೂ ಹೆಚ್ಚಿನ ಸೇವೆಯನ್ನು ಮಾಡಲು ಸಹಕಾರ ಅನೇಕ ಪೌರಕಾರ್ಮಿಕರ ಹಿತ ಕಾರ್ಯವನ್ನು ಮಾಡುತ್ತಿದ್ದು ನಮ್ಮ ಯೋಜನೆ ನಿರ್ದೇಶಕರಾದ ಚಿತ್ರದುರ್ಗ ಜಿಲ್ಲಾಧಿಕಾರಿಗಳು ನೀಡುವ ಮಾರ್ಗದರ್ಶನದ ಪಟ್ಟಣದ ಜನತೆಗೆ ಹೆಚ್ಚಿನ ಸೇವೆ ನೀಡುವ ಅಭಿಲಾಷೆಯನ್ನು ಹೊಂದಿರುತ್ತಾರೆ ಎಂದು ಅವರು ಹೇಳಿದರು.

ಸಫಾಯಿ ಕರ್ಮಚಾರಿ ಜಿಲ್ಲಾ ಸಮಿತಿ ಸದಸ್ಯರಾದ ಮರಿಪಾಲಯ್ಯ ಮಾತನಾಡಿ ಪೌರಕಾರ್ಮಿಕರ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸುತ್ತಿರುವುದು ನಮಗೆಲ್ಲ ಖುಷಿ ತಂದಿದೆ ಎಂದರು.

ಈಸಂದರ್ಭದಲ್ಲಿಉಪಸ್ಥಿತರಾದಪ.ಪಂ ಸದಸ್ಯರಾದ ದುರುಗಪ್ಪ, ಕೆ.ಪಿ.ತಿಪ್ಪೇಸ್ವಾಮಿ, ಪೆದ್ದನಓಬಯ್ಯ, ಆರೋಗ್ಯ ನಿರೀಕ್ಷಕರು ರುದ್ರಮುನಿ, ಪೌರಕಾರ್ಮಿಕರು ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಮತ್ತು ದ್ವಿತಿಯ ಸ್ಥಾನ ಹಾಗೂ ತೃತಿಯ ಸ್ಥಾನ ಪಡೆದವರಿಗೆ ಬಹುಮಾನಗಳನ್ನು ವಿತರಿಸಲಾಯಿತು ಹಾಗೂ ಪೌರಕಾರ್ಮಿಕರಿಗೆ ಸನ್ಮಾನಿಸಿದರು ಮತ್ತು ಪಟ್ಟಣ ಪಂಚಾಯಿತಿಯ ನೌಕರರು ಸಿಬ್ಬಂದಿಗಳು ಹಾಜರಿದ್ದರು.

## ಫಾಸ್ಟ್ ನ್ಯೂಸ್

### ಮಹಿಳೆ ಕಾಣೆ

» ಚಿತ್ರದುರ್ಗ

ಹೊಳಲ್ಕೆರೆ ತಾಲ್ಲೂಕಿನ ರಂಗಾಪುರ ಗ್ರಾಮದ ಸಾಕಮ್ಮ (28 ವರ್ಷ) ಗಂಡ ಲೋಕೇಶಪ್ಪ ಎಂಬ ಮಹಿಳೆ 2023ರ ಸೆಪ್ಟೆಂಬರ್ 9 ರಂದು ಕಾಣೆಯಾಗಿರುವ ಪ್ರಕರಣ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.ಕಾಣೆಯಾದ ಮಹಿಳೆ ಚಹರೆ ಇಂತಿದೆ. ಸಾಕಮ್ಮ 5.1 ಅಡಿ ಎತ್ತರ, ದುಂಡು ಮುಖ, ದೃಢಕಾಯ ಶರೀರ, ಎಣ್ಣೆಗೆಂಪು ಮೈ ಬಣ್ಣ, ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾರೆ. ಈ ಮೇಲ್ಕಂಡ ಮಹಿಳೆಯ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ದೂರವಾಣಿ ಸಂಖ್ಯೆ 08191-275233, 08191-275376, 08194-2224304, 08194-222782 ಸಂಪರ್ಕಿಸಬೇಕೆಂದು ಹೊಳಲ್ಕೆರೆ ಪೊಲೀಸ್ ಠಾಣೆಯ ಉಪನಿರೀಕ್ಷಕರು ತಿಳಿಸಿದ್ದಾರೆ.

### ನಾಗಪುರ ದೀಕ್ಷಾ ಭೂಮಿ ಭೇಟಿ: ಅರ್ಜಿ ಆಹ್ವಾನ

» ಚಿತ್ರದುರ್ಗ

ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2023-24ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಬಸ್ಸುಗಳ ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು, ದೀಕ್ಷಾ ಭೂಮಿಗೆ ಭೇಟಿ ನೀಡುವ ಪರಿಶಿಷ್ಟ ಜಾತಿ ಹಾಗೂ ಪಂಗಡದ ಆಸಕ್ತರು ಸಮಾಜ ಇಲಾಖೆ ವೆಬ್‌ಸೈಟ್ https://sw.kar.nic.in ಆನ್‌ಲೈನ್ ಮೂಲಕ ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 10 ರವರೆಗೆ ಅರ್ಜಿ ಸಲ್ಲಿಸಬಹುದು. ಅಸಕ್ತ ಸಾರ್ವಜನಿಕರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

### ಸೆ.26ರಂದು ಹಿರಿಯ ನಾಗರಿಕರ ಹಕ್ಕುಗಳ ಬಗ್ಗೆ ಕಾನೂನು ಅರಿವು ನೆರವು

» ಚಿತ್ರದುರ್ಗ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಇದೇ ಸೆಪ್ಟೆಂಬರ್ 26ರಂದು ಬೆಳಿಗ್ಗೆ 11 ಗಂಟೆಗೆ ಚಿತ್ರದುರ್ಗ ನಗರದ ಜಿಲ್ಲಾ ಬಾಲಭವನ ಸಭಾಂಗಣದಲ್ಲಿ ಹಿರಿಯ ನಾಗರಿಕರ ಹಕ್ಕುಗಳ ಬಗ್ಗೆ ಕಾನೂನು ಅರಿವು ನೆರವು ಕಾರ್ಯಕ್ರಮ ಹಾಗೂ ಅರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಎಂ.ವಿಜಯ್ ಕಾರ್ಯಕ್ರಮ ಉದ್ಘಾಟಿಸುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಂ.ಅನಿಲ್ ಕುಮಾರ್, ಪ್ರಧಾನ ಕಾರ್ಯದರ್ಶಿ ಆರ್. ಗಂಗಾಧರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ. ವೈಶಾಲಿ, ರಾಜ್ಯ ಸರ್ಕಾರಿ ನಿವೃತ್ತ ನೌಕರರ ಜಿಲ್ಲಾ ಸಂಘದ ಅಧ್ಯಕ್ಷ ಆರ್.ರಂಗಪ್ಪ ರೆಡ್ಡಿ ಭಾಗವಹಿಸುವರು. ಉಪ ಪ್ರಧಾನ ಕಾನೂನು ನೆರವು ಅಭಿರಕ್ಷಕ ಎಂ.ಮೂರ್ತಿ ಅವರು ಹಿರಿಯ ನಾಗರಿಕರ ಹಕ್ಕುಗಳ ಕುರಿತು ಉಪನ್ಯಾಸ ನೀಡುವವರು ಎಂದು ಪ್ರಕಟಣೆ ತಿಳಿಸಿದೆ.

### ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ: ಅರ್ಜಿ

» ಚಿತ್ರದುರ್ಗ

2023-24ನೇ ಸಾಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಣಚಿಣಜ ಞಿಠಟಚಿಷಿಖಿ ಶಿಠಡಿಣಚಿಟ ನಲ್ಲಿ ಅರ್ಜಿ ಸಲ್ಲಿಸಲು ಸಂಬಂಧಪಟ್ಟ ಶಾಲೆಯ ಮುಖ್ಯೋಧ್ಯಾಯರನ್ನು ಸಂಪರ್ಕಿಸಲು ಕೋರಿದೆ. 1 ರಿಂದ 8ನೇ ತರಗತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಯ ಕುಟುಂಬದ ಆದಾಯ ರೂ.6 ಲಕ್ಷ ಮೀರಿರಬಾರದು, 9ರಿಂದ 10ನೇ ತರಗತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಯ ಕುಟುಂಬದ ಆದಾಯ ರೂ.2.50 ಲಕ್ಷ ಮೀರಿರಬಾರದು, ವಿದ್ಯಾರ್ಥಿಯ ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು, ವಿದ್ಯಾರ್ಥಿಯ ಆಧಾರ್ ಕಾರ್ಡ್ ಹಾಗೂ ಪೋಷಕರ ಆಧಾರ್ ಕಾರ್ಡ್‌ನ್ನು ಸಲ್ಲಿಸಬೇಕು, ಶಾಲೆಗಳ ಮುಖ್ಯೋಧ್ಯಾಯರ ಲಾಗಿನ್‌ನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿಸಲ್ಲಿಸಬಹುದು,ಕಡ್ಡಾಯವಾಗಿವಿದ್ಯಾರ್ಥಿಗಳ ಖಾತೆಗೆ ಆಧಾರ್ ಜೋಡಣೆಯಾಗಿರಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಗ್ರೇಡ್-1 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂದು ಉದ್ಯೋಗ ಮೇಳ

ದಾವಣಗೆರೆ: ವಿಕಲಚೇತನರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಭಾರತ ಸರ್ಕಾರ, ಉದ್ಯೋಗ ಮಹಾ ನಿರ್ದೇಶನಾಲಯ, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಪೀಣ್ಯ, ಬೆಂಗಳೂರು, ಇವರುಗಳ ಸಹಯೋಗದೊಂದಿಗೆ ಸೆಪ್ಟೆಂಬರ್ 26 ರಂದು ಬೆಳಿಗ್ಗೆ 10 ಗಂಟೆಗೆ ಸರಕಾರಿ ಗಿರಿಧರ ರಾಮನಾರಾಯಣ ಇನ್ಸಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟಿಸ್, ಬೆಂಗಳೂರು ಈ ಆವರಣದಲ್ಲಿ ಮೇಳ ಆಯೋಜಿಸಲಾಗಿದೆ.



# ಮತ್ತೊಂದು ಕೊರೊನಾ ಬರಲಿದೆಯೇ?

## ಚೀನಾದ ಖ್ಯಾತ ವೈರಾಲಜಿಸ್ಟ್ ಬ್ಯಾಟ್‌ವುಮನ್ ಹೇಳಿದ್ದೇನು?

ಬಾವಲಿ ಜಿಂಗ್ ಪ್ರಾಣಿಗಳಿಂದ ಹುಟ್ಟುವ ವೈರಸ್‌ಗಳ ಕುರಿತು ತನ್ನ ವ್ಯಾಪಕ ಸಂಶೋಧನೆಯಿಂದಾಗಿ "ಬ್ಯಾಟ್‌ವುಮನ್" ಎಂದು ಪ್ರಸಿದ್ಧವಾಗಿರುವ ಚೀನಾದ ಪ್ರಮುಖ ವೈರಾಲಜಿಸ್ಟ್ ಶಿ ಝೆಂಗ್ಲಿ ಆತಂಕಕಾರಿ ಎಚ್ಚರಿಕೆಯೊಂದನ್ನು ನೀಡಿದ್ದಾರೆ. ಭವಿಷ್ಯದಲ್ಲಿ ಮತ್ತೊಂದು ಕೊರಾನಾ ವೈರಸ್ ಬರುವ ಸಾಧ್ಯತೆಯಿದೆ ಎಂದು ತಮ್ಮ ಸಹೋದ್ಯೋಗಿಗಳೊಂದಿಗೆ ಸೇರಿ ಬರೆದ ಸಂಶೋಧನಾ ಲೇಖನದಲ್ಲಿ ಶಿ ಒತ್ತಿ ಹೇಳಿದ್ದಾರೆ. ಈ ಎಚ್ಚರಿಕೆಯ ಟಿಪ್ಪಣಿಯು ಆಕೆಯ ಪರಿಣತಿಯನ್ನು ಆಧರಿಸಿದೆ. ಏಕೆಂದರೆ ಕೊರೊನಾವೈರಸ್ ಈ ಹಿಂದೆ 2003 ಸಿವಿಯರ್ ಅಕ್ಯೂಟ್ ರೆಸ್ಪಿರೇಟರಿ ಸಿಂಡ್ರೋಮ್ (ಖಂಖಿಖ) ಮತ್ತು ಕೋವಿಡ್ -19 ಸಾಂಕ್ರಾಮಿಕ ರೋಗಗಳಂತಹ ಪ್ರಮುಖ ರೋಗ ಹರಡುವಿಕೆಗೆ ಕಾರಣವಾಗಿವೆ ಎಂದು ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

ವುಹಾನ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯ ಶಿ ಮತ್ತು ಅವರ ತಂಡವು 40 ವಿವಿಧ ಕೊರೊನಾವೈರಸ್ ಪ್ರಭೇದಗಳ ಮೌಲ್ಯಮಾಪನವನ್ನು ನಡೆಸಿದ್ದು, ಇದರಲ್ಲಿ ಅರ್ಧದಷ್ಟು "ಅತ್ಯಂತ ಅಪಾಯಕಾರಿ" ಎಂದು ವರ್ಗೀಕರಿಸಲಾಗಿದೆ. ಇವುಗಳಲ್ಲಿ ಆರು ಈಗಾಗಲೇ ಮಾನವರಲ್ಲಿ ರೋಗಗಳನ್ನು ಉಂಟುಮಾಡಿದೆ. ಆದರೆ ಪುರಾವೆಗಳನ್ನು ನೋಡಿದರೆ ಮೂರು ಇತರ ಪ್ರಾಣಿ ಪ್ರಭೇದಗಳಿಗೆ ಸೋಂಕು ತಗುಲಿವೆ ಎಂದು ಸೂಚಿಸಿವೆ.

ಮತ್ತೊಂದು ಕೊರೊನಾವೈರಸ್ ಸಂಬಂಧಿತ ಸಾಂಕ್ರಾಮಿಕ ಹೆಚ್ಚಿನ ಸಂಭವನೀಯತೆಯೊಂದಿಗೆ "ಭವಿಷ್ಯದ ಕಾಯಿಲೆಯ ಹೊರಹೊಮ್ಮುವಿಕೆ" ಬಹುತೇಕ ಖಚಿತವಾಗಿದೆ ಎಂದು ಸಂಶೋಧನೆ ಹೇಳಿದೆ. ಜನಸಂಖ್ಯೆಯ ಡೈನಾಮಿಕ್ಸ್, ಆನುವಂಶಿಕ ವೈವಿಧ್ಯತೆ, ರೋಗ ತಗಲುವ ಪ್ರಬೇಧಗಳು ಮತ್ತು ಝೂನೋಟಿಕ್ ಪ್ರಸರಣದ ಇತಿಹಾಸ (ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ರೋಗಗಳು) ಸೇರಿದಂತೆ ವಿವಿಧ ವೈರಲ್ ಗುಣಲಕ್ಷಣಗಳ ವಿಶ್ಲೇಷಣೆ ನಡೆಸಿ ಈ ತೀರ್ಮಾನಕ್ಕೆ ಮಾಡಲಾಗಿದೆ.

ಶಿ ಅವರ ಕೆಲಸದ ಸುತ್ತ ವಿವಾದ

ವುಹಾನ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯಲ್ಲಿ ಸಂಭಾವ್ಯ



ಲ್ಯಾಬ್ ಸೋರಿಕೆಯಿಂದ ಕೋವಿಡ್ -19 ಹುಟ್ಟಿಕೊಂಡಿದೆ ಎಂಬ ಅನುಮಾನಗಳೊಂದಿಗೆ, ವಿಶೇಷವಾಗಿ ಕೆಲವು ಅಮೆರಿಕದ ರಾಜಕಾರಣಿಗಳಲ್ಲಿ, ಶಿ ಝೆಂಗ್ಲಿ ಅವರ ಕೆಲಸದ ಬಗ್ಗೆ ವಿವಾದವುಂಟಾಗಿತ್ತು.

ಪ್ರಯೋಗಾಲಯ-ಸೋರಿಕೆ ಸಿದ್ಧಾಂತವು ವಿವಾದಾಸ್ಪದವಾಗಿಯೇ ಉಳಿದಿದೆ, ಅನೇಕ ವಿಜ್ಞಾನಿಗಳು ವೈರಸ್ ಮಧ್ಯವರ್ತಿ ವಾಹಕ ಮೂಲಕ ಮನುಷ್ಯರಿಗೆ ಹರಡುವ ಮೊದಲು ಪ್ರಾಣಿಗಳಲ್ಲಿ, ಬಹುಶಃ ಬಾವಲಿಗಳಿಂದಾಗಿ ಹುಟ್ಟಿಕೊಂಡಿರಬಹುದುಎಂಬಊಹೆಯನ್ನುಬೆಂಬಲಿಸುತ್ತಾರೆ. ಜೂನ್‌ನಲ್ಲಿ ಬಿಡುಗಡೆಯಾದ ಡಿಕ್ಲಾಸಿಫೈಡ್ ಗಖ ಗುಪ್ತಚರ ದಾಖಲೆಗಳು ಲ್ಯಾಬ್ ಸೋರಿಕೆ ಸಿದ್ಧಾಂತವನ್ನು ಬೆಂಬಲಿಸುವ ಯಾವುದೇ ನಿರ್ಣಾಯಕ ಪುರಾವೆಗಳಿಲ್ಲದಿದ್ದರೂ, ಅದನ್ನು ಖಚಿತವಾಗಿ ತಳ್ಳಿಹಾಕಲಾಗುವುದಿಲ್ಲ ಎಂದು ಗಮನಿಸಿದರು.

ಪ್ರತ್ಯೇಕವಾಗಿ, ಚೀನಾದ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರಗಳ ಅನಾಮಧೇಯ ವಿಜ್ಞಾನಿಯೊಬ್ಬರು ಚೀನಾದ ಕೋವಿಡ್-19 ನಿರ್ವಹಣೆಯಲ್ಲಿ ಗ್ರಹಿಸಬಹುದಾದ ಬದಲಾವಣೆಯನ್ನು ಗಮನಿಸಿದ್ದು, ಚೀನಾದ ಅಧಿಕಾರಿಗಳು ವೈರಸ್‌ನ ಮಹತ್ವವನ್ನು ಕಡಿಮೆ ಮಾಡುತ್ತಿರಬಹುದು ಎಂದು ಸೂಚಿಸಿದ್ದಾರೆ. ಕೆಲವು ನಗರಗಳು ಸೋಂಕಿನ ಡೇಟಾವನ್ನು ಬಿಡುಗಡೆ ಮಾಡುವುದನ್ನು ನಿಲ್ಲಿಸಿವೆ. ಇದು ಸಾರ್ವಜನಿಕ ಆರೋಗ್ಯದ ಆದ್ಯತೆಗಳಲ್ಲಿ ಬದಲಾವಣೆಯನ್ನು ಸೂಚಿಸುತ್ತದೆ.

## ಪ್ರಮುಖ ಸುದ್ದಿ

**ಹೊಸದುರ್ಗ ತಾಲ್ಲೂಕಿನ ಕಂಚೀಪುರದ ಶ್ರೀ ಕಂಚೀವರದಸ್ವಾಮಿ ದೇವರ ಉತ್ತರೆ ಮಳೆ ಅಂಬಿನೋತ್ಸವ ಸೆ. 26 ರಂದು ಮಂಗಳವಾರ ವಿಶೇಷವಾಗಿ ನಡೆಯಲಿದ್ದು ತನ್ನಮಿತ್ತ ಈ ಲೇಖನ.**

# ದುಡ್ಡು ತೂರುವ ವಿಶಿಷ್ಟ ಶೈಲಿಯ ಅಂಬಿನೋತ್ಸವ



ಕಂಚೀಪುರದ ಕಂಚಿವರದಸ್ವಾಮಿ.





ಹೊಸದುರ್ಗ ತಾಲೂಕಿನ ಕಂಚೀಪುರದ ಕಂಚಿವರದಸ್ವಾಮಿಯ ದೇವಾಲಯ



ಹರಕೆ ತೀರಿಸಲು ನಾಣ್ಯಗಳನ್ನು ದೇವರ ಮೇಲೆ ತೂರಲು ಸಿದ್ದರಾಗಿರುವ ಭಕ್ತರು.

» ನಾಗತಿಹಳ್ಳಿಮಂಜುನಾಥ್.
ಹೊಸದುರ್ಗ

ಹೊಸದುರ್ಗ:ನಾಡಿನುದ್ದಗಲಕ್ಕೂ ಆಶ್ವೀಜ ಮಾಸದ ಮಹಾಲಯ ಅಮವಾಸ್ಯೆಯಿಂದ ನವರಾತ್ರಿ ಅಂಬಿನೋತ್ಸವ ನಡೆಯುವುದು ಒಂದು ಸಂಪ್ರದಾಯ ಆದರೆ ಚಿತ್ರದುರ್ಗ ಜಿಲ್ಲೆಹೊಸದುರ್ಗತಾಲ್ಲೂಕುಕಂಚೀಪುರದ ಶ್ರೀಕಂಚೀವರದಸ್ವಾಮಿ ಅಂಬಿನೋತ್ಸವ ದಸರಾ ಹಬ್ಬಕ್ಕೆ ಮೋದಲೇ ಜರುಗುವ ವಿಶಿಷ್ಟ ಶೈಲಿಯ ಉತ್ಸವ ಇದನ್ನು ಉತ್ತರೆ ಮಳೆ ಅಂಬು ಎನ್ನುತ್ತಾರೆ.

ಸಾಹಿತ್ಯ ಸಂಗೀತ ಕಲೆ ಜಾನಪದ ರಂಗಭೂಮಿಗಳಿಗೆ ತನ್ನದೆ ಅದ ವಿಶಿಷ್ಟ ಕೊಡುಗೆ ನೀಡಿರುವ ಹೊಸದುರ್ಗ ತಾಲ್ಲೂಕು ಆದ್ಯಾತ್ಮಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲೂ ವೈಶಿಷ್ಟ್ಯತೆ ಪಡೆದಿದೆ. ತಾಲ್ಲೂಕಿನ ಕಂಚೀಪುರದ ಗ್ರಾಮದಲ್ಲಿ ನೆಲಸಿರುವ ಮಹಾ ಮಹಿಮಾನ್ವಿತ ಶ್ರೀಕಂಚೀವರದಸ್ವಾಮಿ ದೇವರ ಮಹಿಮೆ ದೊಡ್ಡದು ಮಹಾಲಯ ಅಮಾವಾಸ್ಯೆಯಿಂದ 9 ದಿನಗಳ ಕಾಲ ಎಲ್ಲಾ ಕಡೆಯಲ್ಲೂ ನವರಾತ್ರಿ ಉತ್ಸವ ಜರುಗಲಿದ್ದು ಕಂಚೀಪುರದ ಶ್ರೀ ಕಂಚೀವರದರಾಜ ಸ್ವಾಮಿಯ ಅಂಬಿನೋತ್ಸವ ನವರಾತ್ರಿ ಮುಂಚೆಯೇ ಅಂದರೆ ಉತ್ತರೆ ಮಳೆ ಹುಟ್ಟಿದ ನಂತರ ಬರುವ ಸೋಮವಾರ ಮತ್ತು ಮಂಗಳವಾರ ನಡೆಯಲಿದೆ ಪುರಾಣ ಪ್ರಸಿದ್ದವಾದ ಈ ದೇವರಿಗೆ ಪುರಾತನ ಕಾಲದಿಂದಲೂ ಇದೆ ಸಂಪ್ರದಾಯದ ರೂಡಿಸಿಕೊಂಡು ಬರಲಾಗಿದೆ.

**ನಮ್ಮಜನ ವಿಶೇಷ**

ದೇವರು ಪಟ್ಟಕ್ಕೆ ಕೂರುವ ಮುನ್ನಾ ಉತ್ತರೆ ಮಳೆ ನೀರಿನಿಂದ ನಾಮವನ್ನು ತೇಯಿದು ದೇವರಿಗೆ ಹಚ್ಚಬೇಕೆಂಬುದು ಪದ್ಧತಿ ಕಂಚೀಪುರ ಕ್ಷೇತ್ರದ ಈ ದೇವರ ಮಹಿಮೆ ಪವಾಡ ಬಹು ವಿಶೇಷತೆಗಳಿಂದ ಕೂಡಿದೆಅಂಬಿನೋತ್ಸವವು ಜಾನಪದ ಶೈಲಿಯಲ್ಲಿ ಜರುಗುವುದು ಗಮನಾರ್ಹ ಸಂಗತಿ ಕಂಚೀವರದರಾಜ ಸ್ವಾಮಿಯ ಈ ಉತ್ಸವವನ್ನು ಉತ್ತರೇ ಮಳೆ ಅಂಬು ಎಂದೂ ಕರೆಯುತ್ತಾರೆ ನಾಡಿನಲ್ಲಿ ಈ ರೀತಿ ನಡೆಯುವ ಏಕೈಕ ಉತ್ಸವ ಇದು ಎಂದರೂ ತಪ್ಪಾಗಲಾರದು ಜಿಲ್ಲೆಯಲ್ಲೇ ಅತ್ಯಂತ ವಿಶೇಷವಾಗಿ ನಡೆಯುವ ಈ ಉತ್ಸವಕ್ಕೆ ನಾಡಿನ ನಾನಾ ಭಾಗಗಳಿಂದ ಭಕ್ತರು ಲಕ್ಷಾಂತರ ಸಂಖ್ಯೆಯಲ್ಲಿ ಬರುತ್ತಾರೆ. ಈ ದೇವರ ಇನ್ನೊಂದು ಹಿರಿಮೆ ಎಂದರೆ ಬೇರೆ ದೇವರಂತೆ ಹಣ್ಣು ಕಾಯಿ ಧೂಪ ದೀಪ ಆಭರಣ ವಸ್ತ್ರಗಳನ್ನು ಬಯಸುವುದಿಲ್ಲ ಇವುಗಳನ್ನು ಸಮರ್ಪಿಸುವುದರಿಂದ ದೈವ ಸಂತೃಪ್ತಿಯಾಗುವುದಿಲ್ಲ ಈ ದೇವರನ್ನು ಆರಾಧಿಸುವ ಬಗಯೇ ಬಹು ಸ್ವಾರಸ್ಯಕರ ಅಪರೂಪದ ಸಂಗತಿ.

ಅಂಬಿನೋತ್ಸವದಲ್ಲಿ ಇಷ್ಟು ರೂಪಾಯಿ ಮೌಲ್ಯದ ನಾಣ್ಯಗಳನ್ನು ನಿನ್ನ ಮೇಲೆ ತೂರುವ ಮೂಲಕ ಸಮರ್ಪಿಸುವೆ ಎಂದು ಭಕ್ತರು ಈ ದೇವರಿಗೆ ಸಂಕಲ್ಪ ಮಾಡುತ್ತಾರೆ. ಉತ್ಸವ ಮೂರ್ತಿ ದೇವಾಲಯದಿಂದ ಅಂಬಿನೋತ್ಸವಕ್ಕೆ ಹೊರಟು ಮೆರವಣಿಗೆಯಲ್ಲಿ ಸಾಗುವಾಗ ಸಹಸ್ರಾರು ಸಂಖ್ಯೆಯಲ್ಲಿ ಸೇರಿರುವ ಭಕ್ತರು ತಮ್ಮ ಶಕ್ತಾನುಸಾರ ದೇವರ ಮೇಲೆ ನಾಣ್ಯಗಳನ್ನುತೂರುತ್ತಾರೆ ಇದು ಅಪೂರ್ವ ದೃಶ್ಯವಾಗಿದೆ ಈ ರೀತಿ ಲಕ್ಷಾಂತರ ರೂಪಾಯಿ ನಾಣ್ಯಗಳನ್ನು ಭಕ್ತರು ದೇವರ ಮೇಲೆ ತೂರಿ ಕೃತಾರ್ಥರಾಗುತ್ತಾರೆ.

ಈ ರೀತಿ ಬಯಲಿನಲ್ಲಿ ದೇವರ ಮೇಲೆ ತೂರಿದ ಹಣವನ್ನು ಭಕ್ತರು ಪ್ರಸಾದವೆಂದು ಭಾವಿಸಿ ಅರಿಸಿಕೊಂಡು ದೇವರು ಕೊಟ್ಟವ ಎಂದು ಧನ್ಯರಾಗುತ್ತಾರೆ ಈ ರೀತಿ ನಾಣ್ಯಗಳನ್ನು ತೂರುವ ಸಂದರ್ಭವನ್ನು ಭಕ್ತ ಸಮುದಾಯ ಕುತೂಹಲದಿಂದ ವೀಕ್ಷಿಸುತ್ತಾರೆ ಕೆಲವರಂತೂ ಚೀಲಗಳಲ್ಲಿ ತುಂಬಿ ನಾಣ್ಯಗಳನ್ನು ತೂರುತ್ತಾರೆ ಈ ರೀತಿ ಹಿಡಿ ಹಿಡಿ ನಾಣ್ಯ ತೂರುವ ದೃಶ್ಯ ರೋಮಾಂಚನಕಾರಿಯಾಗಿರುತ್ತದೆ ಈ ರೀತಿ ಭಕ್ತರು ತಮ್ಮ ಅನನ್ಯ ಭಕ್ತಿ ಸಮರ್ಪಣೆ ಮಾಡುತ್ತಾರೆ.ಈ ದೇವರಿಗೆ ಉತ್ತವದ ದಿನ ಪಾಪಾಣದೆಡೆ ಸೊರಗಂಬಲಿಯಂತರ ಅನೇಕ ಸೇವೆಗಳು ಸಲ್ಲಲ್ಪಡುತ್ತವೆ ಈ ಬಗ್ಗೆ ಕಂಚೀಪುರದ ಶಾಸನೋಕ್ತವಾಗಿರುವ ಜಾನಪದ ತ್ರಿಪದಿ ದಂತ ಕಥೆಗಳಲ್ಲಿ ಈ ದೇವರ ಅನೇಕ ಅಚಾರ ವಿಚಾರಗಳು ಸಂಶೋದನಾತ್ಮಕವಾಗಿದೆ.

ಆನಾಕರ್ಷಣೆಯ ಈ ಜಾತ್ರೆಯಲ್ಲಿ ದೇವರು ಉತ್ತರೇ ಗುಡ್ಡ ಕಂಚೀಪುರ ದೊಡ್ಡ ವಜ್ರ ದಶರಥ ರಾಮೇಶ್ವರ ಕಾನುವೇಹಳ್ಳಿ, ದಾಸಯ್ಯನಕಾವಲು ಧೂಪದಕಣ, ಕಣಿವೆ ರಂಗಸ್ವಾಮಿ, ವಜ್ರ ಕಗ್ಗಲಕಟ್ಟೆ ಹಾಳು ಸಂಗಾಪುರ, ಗೊಲ್ಲರಹಳ್ಳಿಗಳಿಗೆ ಬಿಜಯಂಗೈದು ಅಂಬು ಹೊಡೆಯುತ್ತದೆ.

ಉತ್ಸವದ ಹಿಂದಿನ ರಾತ್ರಿ ಅತ್ಯಂತ ಪರಿಶುದ್ದವಾಗಿ ಮಡಿಯಿಂದ ಹದಿನಾರು ಸೇರು ಅಕ್ಕಿಯ ಬುತ್ತಿ ಬಾನ ಮಾಡುತ್ತಾರೆ ಕಾರ್ಣಿಕ ಹೋಮ ಸಹ ನಡೆಯುತ್ತದೆ ಬೆಳಗಿನ ಜಾವ ದೊಡ್ಡ ದೇವರನ್ನು ಹೊತ್ತು ಬುತ್ತಿ ಬಾನದ ಗೂಡೆಯನ್ನು ತಲೆಯ ಮೇಲೆ ಹೊತ್ತು ಭಕ್ತ ಸಮುದಾಯ ಸಿದ್ದರ ಬೆಟ್ಟಕ್ಕೆ ಬರುತ್ತದೆ ಇಲ್ಲಿ ಸಿದ್ದರ ಲಿಂಗಗಳಿಗೆ ಪೂಜೆ ಮಾಡಿ ಬುತ್ತಿ ಬಾನ ಸಡಿಲಿಸಿ ಮೂರು ಮಿಡಿಕಡೆ ಎಡೆ ಹಿಡಿದು ಹಳೆಯ ಕಾಲದ ಬಿಲ್ಲು ಬಾಣಗಳಿಂದ ತೆಂಗಿನಕಾಯಿ ಒಡೆದು ತೀರ್ಥ ಬಿಡುತ್ತಾರೆ. ಈ ರೀತಿಯಲ್ಲಿ ಉತ್ತರೆ ಮಳೆ ಅಂಬು ಭಯ ಭಕ್ತಿಯಿಂದ ಶ್ರದ್ಧಾ ಪೂರ್ವಕವಾಗಿ ಸ್ವಾಮಿಯ ಸೇವಾ ಕಾರ್ಯಗಳು ಜರುಗುತ್ತವೆ.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T